International Journal of Kannada Research
www.kannadajournal.com

ISSN: 2454–5813
IJKR 2023; 9(4): 148-161
© 2023 IJKR
www.kannadajournal.com
Received: 02-10-2023
Accepted: 05-11-2023

**ಮಂಜುನಾಥ ಕೆ**
ಸಂಶೋಧನಾರ್ಥಿ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಮಂಜುನಾಥ ಕೆ**
ಸಂಶೋಧನಾರ್ಥಿ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ, ಕರ್ನಾಟಕ, ಭಾರತ

# ವೇದಾವತಿ ನದಿ ತೀರದ ಸ್ತ್ರೀ ಸಂವೇಧನೆಗಳು: ಒಂದು ಸಮೀಕ್ಷೆ

**ಮಂಜುನಾಥ ಕೆ**

**DOI:** https://doi.org/10.22271/24545813.2023.v9.i4c.910

## ಪೀಠಿಕೆ

ಪ್ರಾಚೀನ ಕಾಲದಿಂದ ಪ್ರಚಾರದಲ್ಲಿದ್ದ ಕಥೆಗಳನ್ನು ಪುರಾಣ ಒಳಗೊಂಡಿರುತ್ತದೆ, ಇದಕ್ಕೆ ಆಂಗ್ಲಭಾಷೆಯಲ್ಲಿ ‘Mystery’ or ‘Myth’ ಎಂದರೆ, ಗ್ರೀಕ್‌ನಲ್ಲಿ ಒಥಿಣಖಥ ಎನ್ನುವರು. ಇವೆಲ್ಲದರ ಅರ್ಥ ಹೇಳಿದ ಸಂಗತಿ, ರಹಸ್ಯಮಯ, ಗೂಢವಾದದು ಎಂದು. ದೇವತೆಗಳು, ಭೂಮಿ, ಸೂರ್ಯ–ಚಂದ್ರ, ನಕ್ಷತ್ರ, ಆಕಾಶ, ಪ್ರಾಣಿ, ಪಕ್ಷಿ, ಮಾನವರು ಮುಂತಾದವುಗಳ ಸೃಷ್ಠಿಯನ್ನು ಕುರಿತು ಹೇಳುವುದೇ ಪುರಾಣಗಳು, ಲುವಿಸ್ ಸ್ಪೆನ್ಸರು ಅವರು ಪುರಾಣಗಳ ಬಗ್ಗೆ ಹೇಳುತ್ತ ’ಪುರಾಣ ಯಾವುದೆಂದು ಕಟ್ಟುನಿಟ್ಟಾಗಿ ಹೇಳುವುದಾದರೆ ಒಂದು ವಿಧಿಕ್ರಮದ ವರ್ಣನೆ, ಅದರ ಆಚರಣೆಗೆ ಸಂಬಂಧಿಸಿದ ಪುರಾಣ ಕಥೆಯ ನಿರೂಪಣೆಯಾಗಿದೆ’ ಎಂದಿದ್ದಾರೆ. ಅಂದರೆ ನಮ್ಮಲ್ಲಿ ಆಚರಣೆಗೊಳ್ಳುತ್ತಿರುವ ಧಾರ್ಮಿಕ ವಿಧಿಕ್ರಮಗಳೊಡನೆ ಪುರಾಣಗಳು ಸೃಷ್ಟಿಯಾಗಿ ನಿಸರ್ಗದ ಶಕ್ತಿಗಳನ್ನು ದೇವತೆಗಳ ರೂಪದಲ್ಲಿ ಚಿತ್ರಿಸಲು ಪುರಾಣಕಥೆಗಳು ಸಹಾಯಕವಾಗುತ್ತವೆ. ಎಂಬ ಅಭಿಪ್ರಾಯವನ್ನು ಲುವಿಸ್ ವ್ಯಕ್ತಪಡಿಸಿದ್ದಾರೆ.
ಕೆಲ ಇತಿಹಾಸದ ವಿಷಯಗಳು ಪುರಾಣ – ಕಥೆಗಳ ಉಗಮಕ್ಕೆ ಪ್ರೇರಕವಾಗುತ್ತವೆ. ಪರಂಪರಗತವಾಗಿ ನಡೆದ ಸಂಗತಿಗಳೇ ಕ್ರಮಾನುಗತವಾಗಿ ಪುರಾಣಗಳಾಗಿ ಮಾರ್ಪಡಾಗುತ್ತವೆ. ಇದರಲ್ಲಿ ಕೆಲವೊಮ್ಮೆ ಕಲ್ಪನಾತ್ಮಕ ಕಥೆಗಳು ಸೇರಿರುತ್ತವೆ. ಪುರಾಣಗಳು ಕೆಲವೊಮ್ಮೆ ವಿಚಿತ್ರವೆನಿಸಿದರೂ ಅರ್ಥಹೀನವಾಗಿರುವುದಿಲ್ಲ. ಅವು ಸಂಕೀರ್ಣತೆಯ ಜೊತೆಗೆ ಜಟಿಲವೂ ಆಗಿರುತ್ತವೆ. ಪ್ರಾಣಿ, ಸಸ್ಯ, ಮಾನವ ಈ ಮೂರರ ಸಮನ್ವಯತೆಯಿಂದ ಪುರಾಣ ಹುಟ್ಟುತ್ತದೆ. ಪುರಾಣಸೃಷ್ಟಿಗೆ ಭೌತಿಕ ಆಧಾರಗಳು ಬೇಕಿಲ್ಲ. ನಂಬಿಕೆ, ಶ್ರದ್ಧೆ, ಮೌಲ್ಯ, ಆದರ್ಶಗಳು ಮಾತ್ರ ಕಾರಣವಾಗುತ್ತವೆ. ಆದ್ದರಿಂದ ರಾಮಾಯಣ, ಮಹಾಭಾರತ ಎಂಬ ಪುರಾಣಗಳು ನಮ್ಮ ದೇಶದ ಮಹಾಕಾವ್ಯಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.
ಪುರಾಣಗಳು ಕೇವಲ ಶಿಷ್ಟದೈವಗಳ ಸೃಷ್ಟಿಯಲ್ಲಿ ಮಾತ್ರ ಇರದೆ ಗ್ರಾಮದೇವತೆಗಳ ಹುಟ್ಟು, ಬೆಳವಣಿಗೆಯ ಬಗ್ಗೆಯೂ ತಮ್ಮ ಅಸ್ತಿತ್ವವನ್ನು ಮೂಡಿಸಿವೆ. ಗ್ರಾಮದೇವತೆಗಳ ಬಗೆಗೆ ಅನೇಕ ಮೂಲಗಳಿಂದ ಮಾಹಿತಿ ದೊರೆಯಬಹುದಾದರೂ ಶಾಸನಗಳಲ್ಲಿ ಅಷ್ಟಾಗಿ ಗ್ರಾಮದೇವತೆಗಳ ವಿಷಯಗಳು ದೊರೆಯುವುದಿಲ್ಲ. ಪುರಾಣಗಳು ಸಾಮಾನ್ಯ ಮನುಷ್ಯನಿಗೂ ಮತ್ತು ದೈವಕ್ಕೂ ಇರುವ ವ್ಯತ್ಯಾಸವನ್ನು ಅರ್ಥೈಸಲು ಸಹಕಾರಿಯಾಗುತ್ತವೆ. ಆದ್ದರಿಂದಲೇ ಹಲವಾರು ದೈವಗಳ ಕುರಿತ ಪುರಾಣಗಳು ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಜನ್ಮತಾಳಿರುತ್ತವೆ.
ಪುರಾಣಗಳಷ್ಟೇ ಮಹತ್ವವನ್ನು ಐತಿಹ್ಯಗಳು ಸಹ ಪಡೆದಿರುತ್ತವೆ. ಆದರೆ ಐತಿಹ್ಯಗಿಂತ ಪುರಾಣ ಪ್ರಾಚೀನವಾಗಿರುತ್ತದೆ. ಐತಿಹ್ಯಗಳು ಒಂದು ನಾಡಿನ ಹಾಗೂ ಒಂದು ಗುಂಪಿನ ದೇವತೆಯ ಉಗಮದ ಇತಿಹಾಸವನ್ನು ತಿಳಿಸುತ್ತವೆ. ಐತಿಹ್ಯಗಳೆಂಬುವು ಅಸ್ತಿತ್ವದಲ್ಲಿರುವ ಅಥವಾ ಇದ್ದ ಒಂದು ಸ್ಥಳ ಅಥವಾ ವ್ಯಕ್ತಿಯನ್ನು ಕುರಿತ ಮಾಹಿತಿಗಳಾಗಿವೆ. ಸ್ಥಳ, ವ್ಯಕ್ತಿ, ದೇವತೆಗಳಿಗೆ ಏಕೆ ಮಹತ್ವದ ಸ್ಥಾನ ದೊರೆತಿದೆ ಎಂಬುದನ್ನು ಇವು ವಿವರಿಸುವುದರ ಜೊತೆಗೆ ಈ ಕಾರಣದಿಂದಲೇ ಇವು ಪ್ರಖ್ಯಾತಿ ಹೊಂದಿವೆ. ’ಐಜರಜಟಿಜ’ ಎಂಬುದಕ್ಕೆ ಸಂವಾದಿಯಾಗಿ ‘ಐತಿಹ್ಯ ಎಂಬ ಪದ ಬಳಸಲಾಗುತ್ತದೆ. ಈ ಐತಿಹ್ಯಗಳ ಮೂಲಕವೇ ವ್ಯಕ್ತಿಗಳು, ಒಂದು ಪ್ರದೇಶ, ಘಟನೆ ಚಿರಂಜೀವಿಯಾಗಿ ಉಳಿಯುತ್ತವೆ. ಈ ಐತಿಹ್ಯಗಳನ್ನು ಕುರಿತು ’ಫ್ರೆಡ್ರಿಕ್‌ರಾಂಕ್’ ಅವರು ಐತಿಹ್ಯವು ತಾನು ಸತ್ಯವೆಂದು ಹೇಳಿಕೊಂಡರೂ ವಸ್ತುನಿಷ್ಠ ದೃಷ್ಟಿಯಿಂದ ಅದು ಅಸತ್ಯವಾಗಿಯೇ ಇರುತ್ತವೆ’ ಎಂದಿದ್ದಾರೆ. ಅಂದರೆ ಐತಿಹ್ಯದಲ್ಲಿ ನಂಬಲಾರ್ಹವಾದ ವಿಷಯಗಳಿದ್ದರೂ ಕೆಲವು ಬಾರಿ ಸತ್ಯಕ್ಕೆ ಸ್ವಲ್ಪದೂರವೂ ಆಗಿರುತ್ತವೆ ಎಂಬ ಭಾವ ರಾಂಕ್ ಅವರ

ಮಾತಿನಲ್ಲಿ ವ್ಯಕ್ತವಾಗಿದೆ. ಐತಿಹ್ಯಗಳು ನಡೆದ ಘಟನೆಗಳ ನಿರೂಪಣೆಯೇ ಆಗಿವೆ. ಈ ಘಟನೆಗಳ ನಿರೂಪಣೆಯ ಉದ್ದೇಶ ಮನೋರಂಜನೆ ಮಾತ್ರವಲ್ಲ ಸಮಕಾಲೀನ ಬದುಕಿಗೆ ಮಹತ್ವವನ್ನು ನೀಡುವುದು. ಇದನ್ನು ವರ್ತಮಾನದೊಂದಿಗೆ ಆನ್ವಯಿಸಿಕೊಂಡು ಅದರ ಮೌಲ್ಯಗಳನ್ನು ಒಪ್ಪಿಕೊಳ್ಳುವ ಪ್ರಯತ್ನವಾಗಿರುತ್ತದೆ. ಇದರಲ್ಲಿ ಆಯಾಯಾ ಪ್ರದೇಶಗಳ ಹಿನ್ನಲೆ, ಸೇರಿರುವುದರಿಂದ ಯಾರು ಎಲ್ಲಿ ಬೇಕಾದರೂ ಐತಿಹ್ಯಗಳನ್ನು ಸೃಷ್ಟಿಸಲು ಸಾಧ್ಯವಾಗುವುದಿಲ್ಲ.

ಐತಿಹ್ಯಗಳಲ್ಲಿ ಕೆಲವು ಸಾರಿ ನಾಟಕೀಯತೆಯೊಂದಿಗೆ ಅತಿಮಾನುಷತೆಯೂ ಕೂಡಿರುತ್ತದೆ. ಐತಿಹ್ಯಗಳ ಸೃಷ್ಟಿಗೆ ಭೌತಿಕ ಆಧಾರಗಳು ಸಹ ಅಗತ್ಯವಾಗಿರುತ್ತವೆ. ಐತಿಹ್ಯಗಳ ಬಗ್ಗೆ ತಿಳಿಸುತ್ತ ವಸಂತಕುಮಾರ ತಾಳಜೆ ಅವರು "ಎಲ್ಲೋ, ಎಂದೋ, ಘಟಿಸಿದ ಘಟನೆ, ಸ್ಥಳ, ವ್ಯಕ್ತಿಗಳ ಮೇಲೆ, ಅಲ್ಲಿನ ಪರಿಸರ ಬೀರಿದ ಪ್ರಭಾವವೇ ಐತಿಹ್ಯಗಳು ಸೃಷ್ಟಿಯಾಗಲು ಕಾರಣ ಎಂದು ತಿಳಿಸಿದ್ದಾರೆ", ಸ್ಥಳೀಯ ನೆಲೆಗಟ್ಟಿನ ಮೇಲೆ ಐತಿಹ್ಯಗಳು ಸೃಷ್ಟಿಯಾಗಿ ಆ ಹಿನ್ನಲೆಯಲ್ಲಿಯೇ ಪ್ರಸಿದ್ಧಿಯನ್ನು ಪಡೆದಿರುತ್ತವೆ. ಆದ್ದರಿಂದಲೇ ಐತಿಹ್ಯಗಳು ಮಹತ್ವವನ್ನು ಪಡೆದಿವೆ.

ಐತಿಹ್ಯಗಳು ಕೇವಲ ಒಂದೇ ಪ್ರದೇಶಕ್ಕೆ ಸೀಮಿತವಾಗಿರುತ್ತವೆಂದು ಹೇಳಲು ಸಾಧ್ಯವಿಲ್ಲ ಅಂತೆಯೇ ಅವುಗಳು ಎಲ್ಲೆಡೆಯೂ ಕಂಡುಬರುವುದಿಲ್ಲ. ಮೀಸಲಾಗಿದ್ದರೆ ಮತ್ತೊಮ್ಮೆ ಬೇರೆಡೆಗೆ ಪಲಾಯನ ಮಾಡಿರುತ್ತವೆ. ಹೀಗೆ ಬೇರೆಡೆಗೆ ಹೋದ ಮಾತ್ರಕ್ಕೆ ಪೂರ್ಣವಾಗಿ ವಲಸೆ ಹೋಗದೇ ಮೂಲಸ್ಥಳದ ಐತಿಹ್ಯಕ್ಕೂ ಇವಕ್ಕೂ ಕೆಲವು ವ್ಯತ್ಯಾಸವಿರುತ್ತವೆ. ಐತಿಹ್ಯಗಳಿಗೆ ಇತಿಹಾಸದೊಂದಿಗೆ ಕೆಲವೊಮ್ಮೆ ಸಂಬಂಧವಿರುತ್ತದೆ. ಇವು ಪೂರ್ಣಕಾಲ್ಪನಿಕವೂ ಅಲ್ಲ. ಪೂರ್ಣ ಪುರಾಣದಂತೆಯೂ ಇರದೇ ಪ್ರತ್ಯೇಕವಾಗಿ ನಿಲ್ಲುತ್ತವೆ. ಇದು ಅಸಾಮಾನ್ಯ ಘಟನೆಯನ್ನು ಸತ್ಯವೆನ್ನುವ ರೀತಿಯಲ್ಲಿ ಕಂಡರಿಸುತ್ತದೆ. ಐತಿಹ್ಯಗಳು ಮನುಷ್ಯನ ಆಲೋಚನೆ, ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾಗುವ ಸಾಧ್ಯತೆಗಳಿರುತ್ತವೆ. ಇದರಿಂದ ಮೂಲ ಐತಿಹ್ಯಗಳು ಒಳಗೊಂಡಿದ್ದ ವಿವರಗಳು ಹಾಗೂ ಸಂದೇಶಗಳಲ್ಲೂ ಮಾರ್ಪಾಡಾಗಿ ಮೂಲ ಸಂದೇಶದಲ್ಲಿ ವೈಪರೀತ್ಯಗಳು ಗೋಚರವಾಗಬಹುದು.

ಪ್ರತಿಯೊಂದು ಗ್ರಾಮಗಳಲ್ಲೂ ಗ್ರಾಮದೇವತೆಗಳು ನೆಲೆಯೂರಿ ಹಾಸುಹೊಕ್ಕಾಗಿರುತ್ತವೆ. ಆದ್ದರಿಂದ ಜನಪದರು ತಮ್ಮ ಅನುಭವಗಳನ್ನು ಒಟ್ಟಾರೆಯಾಗಿ ಸಂಗ್ರಹಿಸಿ ಗ್ರಾಮದೇವತೆಗಳಿಗೆ ಸಂಬಂಧಿಸಿದ ಪುರಾಣ–ಐತಿಹ್ಯ–ಜನಪದಕಥೆಗಳನ್ನು ರಚಿಸಿಕೊಂಡಿರುತ್ತಾರೆ. ಇವು ಪೂರ್ಣ ಸತ್ಯವೂ ಅಲ್ಲದ ಮಿಥ್ಯವೂ ಅಲ್ಲದ ರೀತಿಯಲ್ಲಿ ಜನರ ಮಧ್ಯೆ ಬೆರೆತುಕೊಂಡಿರುತ್ತವೆ. ಎಲ್ಲ ದೇವತೆಗಳ ಆಚರಣೆಗೆ ಐತಿಹ್ಯಗಳಷ್ಟೇ ಮುಖ್ಯವಾಗಿರುವುದಿಲ್ಲ. ಆ ಗ್ರಾಮದೇವತೆಗಳ ಬಗ್ಗೆ ಜನರು ಇಟ್ಟಿರುವ ನಂಬಿಕೆ ಭಕ್ತಿರೂಪ ಪಡೆದಿರುತ್ತವೆ. ಆದರೆ ಐತಿಹ್ಯಗಳು ಪುರಾಣಕ್ಕಿಂತಲೂ ಭಿನ್ನವಾಗಿದ್ದು ಐತಿಹ್ಯವು ಇತಿಹಾಸದ ವಸ್ತುವನ್ನು ಒಳಗೊಂಡಿದ್ದು ವ್ಯಕ್ತಿ, ಊರು, ಘಟನೆಗಳನ್ನು ವಿವರಿಸುತ್ತದೆ.

'ಶಿಷ್ಟ ಸಂಸ್ಕೃತಿ ಪುರಾಣವಾದರೆ, ಜನಪದ ಸಂಸ್ಕೃತಿ ಐತಿಹ್ಯದ ರೂಪ ಪಡೆದಿರುತ್ತದೆ. ಪುರಾಣಗಳು ಪ್ರಬುದ್ಧ ಮನಸ್ಸಿನ ಸೃಷ್ಟಿ, ಐತಿಹ್ಯಗಳು ನಿತ್ಯ ಬದುಕಿನ ಸ್ಥಳೀಯ ಮಾಹಿತಿಯನ್ನು ತಿಳಿಸುತ್ತವೆ. ಇವೆರಡರ ನಡುವೆ ಕೊಡುಕೊಳ್ಳುವಿಕೆ ಅನೇಕ ಕಾಲಗಳಿಂದಲೂ ನಡೆಯುತ್ತಲೇ ಇದೆ. ಆದರೂ ಪುರಾಣ ಮತ್ತು ಐತಿಹ್ಯಗಳ ನಡುವೆ ಭಿನ್ನತೆ ಇದ್ದೇ ಇರುತ್ತದೆ. ಪುರಾಣ ಮತ್ತು ಐತಿಹ್ಯಗಳಲ್ಲಿ ಕೆಲ ಮೂಲ ವ್ಯತ್ಯಾಸಗಳನ್ನು ಇಲ್ಲಿ ಗುರುತಿಸಬಹುದು. ಪುರಾಣಗಳು ಗದ್ಯಾತ್ಮಕವಾದ, ಪರಿಮಿತ ಪಾಠಾಂತರಗಳನ್ನೊಳಗೊಂಡ ನಿರ್ದಿಷ್ಟ ಸ್ಥಳಕ್ಕೆ ಅಂಟಿಕೊಂಡಿರುವ, ವಿಶಿಷ್ಟ ಸ್ವರೂಪದ ಮನೋಜ್ಞ ಕಥಾನಕ, ಐತಿಹ್ಯವೆಂದರೆ ಕೇವಲ ಸ್ಥಳಕಷ್ಟೇ ಅಲ್ಲ, ವ್ಯಕ್ತಿ ಅಥವಾ ಘಟನೆಯೊಂದನ್ನು ಕುರಿತಂತೆ ಸಂಪ್ರದಾಯಿಕ ಮೂಲವಸ್ತುಗಳೊಡನೆ ನಿಜಾಂಶವೊಂದರ ಮೇಲೆ ಆಧಾರವಾಗಿದೆ ಎಂದು ಭಾವಿಸುವ ಕಥೆಯಾಗಿದೆ. ಆದ್ದರಿಂದ ಗ್ರಾಮದೇವತೆಗಳನ್ನು ಕುರಿತ ಪುರಾಣ ಮತ್ತು ಐತಿಹ್ಯಗಳೆರಡು ಮಹತ್ವವನ್ನು ಪಡೆದು ಆ ಮೂಲಕವೇ ಪ್ರಸಿದ್ಧವಾಗಿವೆ.

ಪ್ರಕೃತಿಯಲ್ಲಿನ ಸೂರ್ಯ, ಚಂದ್ರ, ಕಲ್ಲು, ಮಣ್ಣು, ಅರಣ್ಯಗಳನ್ನು ಕಂಡ ಮಾನವ ಅವುಗಳಿಗೆ ದೈವೀಶಕ್ತಿ ಕೊಟ್ಟಂತೆ ಇನ್ನೂ ಹೆಚ್ಚಿನ ಮಾನ್ಯತೆ ಎಲ್ಲರಿಂದಲೂ ದೊರೆತು ಆರಾಧಿಸಲ್ಪಡಲಿ ಎಂಬ ಉದ್ದೇಶದಿಂದ ಈ ರೀತಿಯ ಐತಿಹ್ಯ–ಪುರಾಣಗಳನ್ನು ಸೃಷ್ಟಿಸಿದ್ದಾನೆ. ಅನೇಕ ಜನರು ಇದರಿಂದ ಪ್ರಭಾವಿತರಾಗಿ ಆರಾಧಿಸಬಹುದು. ಹಲವಾರು ತೊಂದರೆಗಳಿಂದ ಬೇಸತ್ತ ಜನರು ಅನೇಕ ದೈವಗಳ ಮೊರೆಹೋಗುವುದು ಸಾಮಾನ್ಯ. ಈ ರೀತಿಯ ಪರಿಸ್ಥಿತಿಯಲ್ಲಿ ಸುತ್ತಮುತ್ತಲ ಅನೇಕ ಜನರಿಂದ ಯಾವುದೋ ದೈವಶಕ್ತಿಯನ್ನು ಈ ಪುರಾಣ–ಐತಿಹ್ಯಗಳಿಂದ ತಿಳಿದು ಆ ದೇವರ ಮೊರೆ ಹೋಗಬಹುದು. ಆದ್ದರಿಂದ ಪುರಾಣ–ಐತಿಹ್ಯಗಳು ದೈವಗಳ ಬಗ್ಗೆ ನಂಬಿಕೆ ಮೂಡಿಸಲು ಸಹಕಾರಿಯಾಗುತ್ತವೆ. ಇದರಿಂದ ದೈವಗಳು ಹೆಚ್ಚು ಪ್ರಖ್ಯಾತಿಯೂ ಆಗುತ್ತವೆ.

ಐತಿಹ್ಯಗಳಿಗೆ ಜನಪದ ಸಾಹಿತ್ಯ ಪ್ರಕಾರದಲ್ಲಿ ವಿಶಿಷ್ಟ ಸ್ಥಾನಮಾನವಿದೆ. ಈ ಪ್ರಕಾರವು ಎಂದೋ ನಡೆದ ಘಟನೆಗಳನ್ನು ಸಂಗತಿಗಳನ್ನು ಕಥನಗಳ ಮೂಲಕ ಉಳಿಸಿಕೊಂಡು ಬಂದಿದ್ದು ಪ್ರಾಚೀನ ಕಾಲಗಟ್ಟದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ಸಹಕಾರಿಯಾಗಿದೆ.ಐತಿಹ್ಯಗಳು ಬಹುಮುಖ ಸಂಸ್ಕೃತಿಯಾಗಿದ್ದು ಪ್ರಾದೇಶಿಕವಾಗಿ ಮತ್ತು ಸಮುದಾಯ ನಿಷ್ಠ ದೃಷ್ಟಿಯಿಂದ ವಿವಿಧತೆಯನ್ನು ಹೊಂದಿರುತ್ತವೆ. ಸ್ಥಳ ಪ್ರಧಾನ ಐತಿಹ್ಯವು ಆಯಾ ಪ್ರದೇಶದ ಸಾಂಸ್ಕೃತಿಕ ಹಿನ್ನೆಲೆಯ ಕುರಿತಾಗಿದ್ದು ಅಲ್ಲಿನ ಸಾಮಾಜಿಕ ಸಂಗತಿಗಳನ್ನು ಒಳಗೊಂಡಿರುವುದು.

ವೇದಾವತಿ ನದಿ ತೀರದಲ್ಲಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿ ಬೆಳೆದುಬಂದಿದೆ.ಕಲೆ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಮತ್ತು ರಾಜಕೀಯಗಳಿಂದ ಆರ್ಥಿಕತೆಯಿಂದ ಸಾಮಾಜಿಕ ಅಂಶಗಳು ಅಗತ್ಯತೆ ಅನುಗುಣವಾಗಿ ಬೆಳೆದಿದೆ.ಒಂದು ಸ್ಥಳದ ಭೌಗೋಳಿಕ ವೈಶಿಷ್ಟ್ಯ ಅಸಾಮಾನ್ಯತೆಯನ್ನು ಗಮನಿಸಿಕೊಂಡು ಸ್ಥಳ ಐತಿಹ್ಯಗಳು ಹುಟ್ಟಿಕೊಂಡಿರುತ್ತೇವೆ. ಇವು ಸ್ಥಳ ಮಹಿಮೆ ವ್ಯಕ್ತಿ ವಿಶೇಷಗಳು ಸಂಪ್ರದಾಯಗಳು ಮತ್ತು ಘಟನೆಗಳನ್ನು ತಿಳಿಸುತ್ತದೆ. ಇವು ಸಂಕ್ಷಿಪ್ತ ರೂಪವಾಗಿದ್ದು ಗದ್ಯಾತ್ಮಕವಾಗಿರುವ ಈ ಸ್ಥಳ ಐತಿಹ್ಯಗಳು ಒಂದು ನಿರ್ದಿಷ್ಟ ಸ್ಥಳ ಬದ್ಧವಾಗಿರುತ್ತದೆ. ವ್ಯಕ್ತಿಗಳೊಂದಿಗೆ ಸ್ಥಳಕ್ಕೆ ಹೆಚ್ಚಿನ ಮಹತ್ವವಿದೆ. ಆದರೆ ಇವು ಹುಟ್ಟಿಕೊಂಡ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಆಸ್ಥಳಕ್ಕೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಗೆ ಸೀಮಿತವಾಗಿರುತ್ತೇವೆ.

**ಅಧ್ಯಯನದ ಉದ್ದೇಶ:**

ಚಿತ್ರದುರ್ಗ ಜಿಲ್ಲೆಯಲ್ಲಿ ಏಕೈಕ ದೊಡ್ಡ ನದಿ ವೇದಾವತಿ ನದಿಯಾಗಿದೆ. ಪ್ರಮುಖವಾಗಿ ಈ ನದಿಗೆ ಹಳ್ಳ ಕೊಳ್ಳಗಳು ಸೇರಿ ನೀರು ಹರಿದು ನದಿಗೆ ಸೇರುತ್ತವೆ. ಈ ನದಿಗೆ ಅಣೆಕಟ್ಟುಗಳು ಫೀಡರ್ ಚಾನಲ್‌ಗಳು ನೀರು ಬರುವುದಕ್ಕೆ ಭದ್ರ ಮೇಲ್ದಂಡೆ ಯೋಜನೆ ತಂದು ಇಲ್ಲಿನ ಜನಪದರ ಕೃಷಿಗೆ ಮಾಡುವುದಕ್ಕೆ ನೀರು ಒದಗಿಸಿರುವುದು ನಂತರ ಪ್ರಮುಖ ಉದ್ದೇವನ್ನು ಕಾಣಲಾಗಿದೆ. ಇಲ್ಲಿ ಅಕ್ಕ ಪಕ್ಕ ಪವಿತ್ರ ದೇವಾಲಯಗಳ ಪ್ರಸಿದ್ಧಿ ಪುಣ್ಯ ಸ್ಥಳಗಳ ಬಗ್ಗೆ ಸಂಶೋಧನೆಗೆ ಒಳಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ವೇದಾವತಿ ನದಿ ತೀರದ ಜನಪದ ಆಚರಣೆಗಳನ್ನು ತಿಳಿಯುವ ಉದ್ದೇಶವನ್ನಿಟ್ಟುಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

೧. ವೇದಾವತಿ ನದಿ ತೀರದ ಪ್ರಮುಖ ಸ್ಥಳಗಳ ಮತ್ತು ಗ್ರಾಮಗಳ ದೈವ–ದೇವಿಯರ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು.
೨. ವೇದಾವತಿ ನದಿ ತೀರದ ಜನರ ಬಗ್ಗೆ ಇದುವರೆಗೆ ನಡೆದಿರುವ ಜನಪದ ಆಚರಣೆ, ಐತಿಹ್ಯ ಹಾಗೂ ಪುರಾಣಗಳನ್ನು ಕುರಿತು ಅಧ್ಯಯನ ಮಾಡುವುದು.

**ಅಧ್ಯಯನದ ವ್ಯಾಪ್ತಿ**

ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಜಿಲ್ಲೆಯ ವೇದಾವತಿ ನದಿ ತೀರದ ಜನಪದ ಆಚರಣೆಗಳ ಮೇಲೆ ಹೆಚ್ಚು ಗಮನ ಹರಿಸಬೇಕಾಗಿದ್ದನ್ನ ಈ ಮುಂಚೆ ಇಷ್ಟೇ ಪರಿಧಿಯನ್ನು ನಿರ್ಮಿಸಿಕೊಂಡಿದ್ದು ಅದು ಬಹು ವ್ಯಾಪಕವಾದ ಸ್ಥಳವನ್ನು ತೋರುವುದರಿಂದ ಮಾರ್ಗದರ್ಶಕರ ಮಾರ್ಗದರ್ಶನದ ಮೇರೆಗೆ ಇದೇ ಜಿಲ್ಲೆಯ ಹಿರಿಯೂರು, ಮೊಳಕಾಲ್ಮೂರು, ಚಳ್ಳಕೆರೆ ಪ್ರದೇಶದ ವೇದಾವತಿ ನದಿ ತೀರದ ಜನಪದರ ಆಚರಣೆಗಳನ್ನು ಅಧ್ಯಯಿನಿಸಬೇಕೆಂದು ನಿರ್ಧರಿಸಿಕೊಂಡು ಸಂಶೋಧನೆಯನ್ನು ಆರಂಭಿಸಲಾಯಿತು. ಮೊದಲ ಹಂತದಲ್ಲಿ ಈ ಆಚರಣೆಯ ನೆಲೆಸುವ ಸ್ಥಳಗಳನ್ನು ಮತ್ತು ಅವರು ಅಲೆಯುವ ಪ್ರದೇಶಗಳ ಸೀಮಿತ ಭಾಗದ ಅಂದಾಜು ಪ್ರದೇಶದ ನಕಾಶೆಯನ್ನು ಸಿದ್ಧಪಡಿಸಿಕೊಳ್ಳಬೇಕಾಯಿತು.

ಚಿತ್ರದುರ್ಗ ಜಿಲ್ಲೆಯನ್ನು ಸಮಗ್ರವಾಗಿ ಹಲವು ತಾಲ್ಲೂಕುಗಳಾಗಿ ವಿಭಾಗಿಸಿದ್ದು ಅದರಲ್ಲಿ ವೇದಾವತಿ ನದಿಯಗೆ ಒಳಪಡುವ ತಾಲ್ಲೂಕುಗಳನ್ನು ಸಂಶೋಧನಾ ವ್ಯಾಪ್ತಿಯಾಗಿ ಅಳವಡಿಸಿಕೊಂಡು ಅಧ್ಯಯನ ಪ್ರಾರಂಭ ಮಾಡಲಾಯಿತು. ಚಿತ್ರದುರ್ಗ ವೇದಾವತಿ ನದಿ ತೀರದ ಜನಪದರ ಆಚರಣೆಗಳಿಗೆ ಕೇವಲ ಚಿತ್ರದುರ್ಗ ಮೂಲ ಪ್ರದೇಶದ ಸಂಕ್ಷಿಪ್ತ ಪರಿಚಯದೊಂದಿಗೆ ಮುಖ್ಯವಾಗಿ ಚಿತ್ರದುರ್ಗ, ಹೊಸದುರ್ಗ, ಚಳ್ಳಕೆರೆ, ಹಿರಿಯೂರು, ಹೊಲ್ಕೆಕೆರೆ, ಮೊಳಕಾಲ್ಮೂರು, ಅಬ್ಬಿನಹೊಳೆ, ಆಲೂರು, ಆನೆಸಿದ್ದಿರಿ, ಅಗ್ರಹಾರ, ಇಕ್ಕನೂರು, ಉಪ್ಪಳಗೆರೆ, ರಂಗನಾಥಪುರ, ಕರಿಯಾಲ, ಕತ್ರಿಕೇನಹಳ್ಳಿ, ದೊಡ್ಡಘಟ್ಟ, ಕೂದೂರು, ಕೊನಿಗರಹಳ್ಳಿ, ಲಕ್ಕವ್ವನಹಳ್ಳಿ, ಬೀರನೆಹಳ್ಳಿ, ಕುರುಬರಹಳ್ಳಿ, ತೊರೆಬೇನಳ್ಳಿ, ರಂಗೇನಹಳ್ಳಿ, ಈಶ್ವರಗೆರೆ, ಅಂಬಲಗೆರೆ, ದೊಡ್ಡಘಟ್ಟ, ಪಿಟ್ಲಹಳ್ಳಿ, ಆಲೂರು, ನಂದಿಹಳ್ಳಿ, ಬಿದಿರಕೆರೆ, ಮೈಲಹಳ್ಳಿ, ರಂಗನಾಥಪುರ, ಲಕ್ಕವ್ವನಹಳ್ಳಿ ವಾಣಿವಿಲಾಸಪುರ, ಹಾಲಗೊಂಡನಹಳ್ಳಿ, ಕಲಮರಹಳ್ಳಿ, ಕಮತ್‌ಮರಿಕುಂಟೆ, ಕಾಲುವೆಹಳ್ಳಿ, ಕೋನಿಗರಹಳ್ಳಿ, ನಾರಾಯಣಪುರ, ಕೊರ್ಲಕುಂಟೆ, ಪರಶುರಾಂಪುರ, ಚೌಳೂರು, ಗುಡಿಹಳ್ಳಿ, ಗೋಸಿಕೆರೆ, ತಿಮ್ಮಣ್ಣನಾಯಕನಕೋಟೆ, ಘಟಪರ್ತಿ, ಚಟ್ಟೆಕಂಬ, ಮತ್ಸಮುದ್ರ, ಚನ್ನಮ್ಮನಾಗತಿಹಳ್ಳಿ, ಜುಂಜರಗುಂಟೆ, ಮೀರಾಸಾಬಿಹಳ್ಳಿ, ಚಿಕ್ಕೇನಹಳ್ಳಿ, ಗೋಪನಹಳ್ಳಿ, ತಿಪ್ಪಗೊಂಡನಹಳ್ಳಿ, ಬೂದಿದಿಬ್ಬದಹಳ್ಳಿ, ಮೋದೂರು, ಮೈಲನಹಳ್ಳಿ, ಬೊಮ್ಮನಕುಂಟೆ, ಜಾಜೂರು, ಯಲಕಟ್ಟೆ ಗೊಲ್ಲರಹಟ್ಟಿ, ರೇಣುಕಾಪುರ, ಸೂರನಹಳ್ಳಿ, ಕೂಡ್ಲಹಳ್ಳಿ, ಬ್ಯಾಡರಹಳ್ಳಿ, ಬುಕ್ಕಂಬೂದಿ, ಮತ್ತೋಡು, ಭರಮಗಿರಿ, ಭಟ್ಟರಹಳ್ಳಿ, ದೇವಸಮುದ್ರ, ಓಬಳಾಪುರ, ತಳವಾರಹಳ್ಳಿ, ಜಾಲಿಗೊಲ್ಲರಹಟ್ಟಿ, ಕಸವಿಗೊಂಡನಹಳ್ಳಿ, ಬಾಗೂರು, ಕಾರೆಹಳ್ಳಿ, ಬೋರನತಿಪ್ಪಡ್ಯಾಂ, ಮುಷ್ಟಗುಮ್ಮಿ, ನಾಗಸಮುದ್ರ ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿದ್ದೇನೆ.

**೫ ಇದುವರೆಗೂ ನಡೆದ ಅಧ್ಯಯನಗಳ ಅವಲೋಕನ**

ವೇದಾವತಿ ನದಿ ತೀರದ ಜನಪದರು ಕೃಷಿ, ಪಶುಪಾಲನೆ, ಕುರಿಸಾಣಿಕೆಯು ಪರಂಪರೆ ಇಡೀ ಜಗತ್ತನ್ನೇ ಆವರಿಸಿಕೊಂಡಿರುವ ಒಂದು ವಿಶೇಷ ಪರಂಪರೆ, ಭಾರತದಲ್ಲಿ ಪಶುಪಾಲನೆಗೆ ತನ್ನದೇ ಆದ ವಿಶಿಷ್ಟ ಸ್ಥಾನಮಾನವಿದೆ. ಭಾರತದ ಅನೇಕ ಬುಡಕಟ್ಟು ಪಂಗಡಗಳು ಇಂದಿಗೂ ತಮ್ಮ ಮೂಲವೃತ್ತಿಯಾಗಿ ಕೃಷಿ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಹಾಗೂ ಪಶುಪಾಲನೆಯನ್ನು ಮುಂದುವರೆಸಿಕೊಂಡು ಬಂದಿರುವುದು ಈಗಲೂ ಕಾಣುತ್ತೇವೆ. ಸಿಂಧೂ ಕೊಳ್ಳದ ನಾಗರಿಕತೆ ಯಿಂದಲೂ ನಮಗೆ ಪಶುಪಾಲನೆಯ ಅನೇಕ ಕುರುಹುಗಳು ಕಾಣುತ್ತವೆ. ಅದರಂತೆಯೇ ಕನ್ನಡ ನಾಡಿನಲ್ಲೂ ಕೂಡ ಪಶುಪಾಲನಾ ಪರಂಪರೆಗೆ ದೊಡ್ಡ ಇತಿಹಾಸವೇ ಇದೆ. ಬೇರೆ ಬೇರೆ ಗುಡ್ಡದ ಪ್ರದೇಶಗಳಿಂದ ಬಂದ ಅನೇಕ ಕೃಷಿಕರು, ಪಶುಪಾಲಕರು, ತಮ್ಮ ಮೂಲ ಆಚರಣೆಗಳನ್ನು ಮರೆತು ಕರ್ನಾಟಕದ ವಿವಿಧ ಗುಡ್ಡಗಾಡು ಪ್ರದೇಶಗಳಲ್ಲಿ ತಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆರೆಯುತ್ತಾ ಕನ್ನಡಿಗರಾಗಿದ್ದಾರೆ.

ಇಂತಹ ವಿಶಿಷ್ಟ ವೇದಾವತಿಯ ನದಿ ತೀರದ ಜನಪದರ ಆಚರಣೆಗಳ ಕುರಿತು ನಾಡಿನ ಅನೇಕ ಸಂಶೋಧಕರು, ವಿದ್ವಾಂಸರು ಅನೇಕ ಅಧ್ಯಯನಗಳನ್ನು ಮಾಡಿದ್ದಾರೆ. ಕೆಲವರು ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದರೆ ಇನ್ನೂ ಕೆಲವರು ಒಂದು ಹೆಜ್ಜೆ ಮುಂದೆ ಹೋಗಿ ಕೃತಿಗಳನ್ನು ರಚಿಸಿದ್ದಾರೆ. ಸಂಶೋಧಕ ವಿದ್ವಾಂಸರು ಸಂಪುಟಗಳಾಗುವಷ್ಟು ಮಾಹಿತಿಯನ್ನು ಗ್ರಂಥಭಂಡಾರಗಳಲ್ಲಿ ವಿವರರಿಸಿದ್ದಾರೆ.

ಮೀರಾಸಾಬಿಹಳ್ಳಿ ಶಿವಣ್ಣನವರು 'ಕಾಡುಗೊಲ್ಲರ ಸಂಸ್ಕೃತಿ' ಎಂಬ ಕೃತಿಯಲ್ಲಿ ಕರ್ನಾಟಕದ ತಳಸಮುದಾಯಗಳ ಆದ ಕಾಡುಗೊಲ್ಲರು ಮ್ಯಾಸ ಬೇಡರ ಮೇಲೆ ಅತಿ ಹೆಚ್ಚಿನ ಸಂಶೋಧನೆಗಳನ್ನು ಕೈಗೊಂಡಿದ್ದಾರೆ, ಅವರ ಎಲ್ಲಾ ಸಂಶೋಧನಾತ್ಮಕ ಬರಹಗಳು ಮತ್ತು ಕೃತಿಗಳು ತಳಸಮುದಾಯದ ಹಿನ್ನೆಲೆಯಲ್ಲಿ ಇಟ್ಟುಕೊಂಡು ವಿಶೇಷವಾಗಿ ಈ ಕೃತಿಯಲ್ಲಿ ಕಾಡುಗೊಲ್ಲರ ಸಾಂಸ್ಕೃತಿಯನ್ನು ಹಲವಾರು ಆಯಾಮಗಳಲ್ಲಿ ಕಂಡುಕೊಂಡಿದ್ದಾರೆ. ಕೃತಿಯ ಆರಂಭದಲ್ಲಿ ಕಾಡುಗೊಲ್ಲರ ಮೂಲವನ್ನು ವಿಶೇಷ ಸಾಂಪ್ರದಾಯದ ಮೂಲಕ್ಕೆ ಅವರ ಪರಂಪರೆಯನ್ನು ಎತ್ತಿ ತೋರಿಸಿದ್ದಾರೆ. ಕಾಡುಗೊಲ್ಲರು ನಾಡನ್ನು ತೊರೆದು ಕಾಡಿನಲ್ಲಿ ವಾಸಿಸುವ ಪರಿಶ್ರಮಗಳು ಅವರ ವಸತಿ ವ್ಯವಸ್ಥೆ ಉಟೋಪಚಾರಗಳು ಧಾರ್ಮಿಕ ಮತ್ತು ಸಾಮಾಜಿಕವಾಗಿರುವ ಆಚರಣೆಗಳು ಇದರಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಕಾಡುಗೊಲ್ಲರ ಆದಿ ದೈವಗಳು ಮತ್ತು ಬುಡಕಟ್ಟು ದೈವಗಳನ್ನು ವಿಶೇಷವಾಗಿ ಅಧ್ಯಯನ ಮಾಡುವುದರ ಮೂಲಕ ಸಮಗ್ರ ಕಾಡುಗೊಲ್ಲರ ದೈವಗಳನ್ನು ಈ ಕೃತಿಯಲ್ಲಿ ಪರಿಚಯಿಸಿದ್ದಾರೆ.

ದೇವೇಂದ್ರ ಕುಮಾರ ಹಕಾರಿ ಇವರು 'ಜನಪದದ ಮೂಲತತ್ವಗಳು' ಎಂಬ ಗ್ರಂಥದಲ್ಲಿ ಜನಪದ ಮೂಲ ತತ್ವಗಳು, ಕೃತಿ ಹಲವು ಕಾರಣಗಳಿಂದ ವಿಶಿಷ್ಟವಾಗಿದೆ. ಪಾಶ್ಚಾತ್ಯ ಜನಪದ ಸಿದ್ಧಾಂತಗಳನ್ನು ಅರಗಿಸಿಕೊಂಡು ಅದನ್ನು ಕನ್ನಡದಲ್ಲಿ ಅನಾವರಣಗೊಳಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿದೆ. ಹಿನ್ನೇಲೆ ಮತ್ತು ನೆಲೆ ಎಂಬ ಎರಡು ವಿಭಾಗಗಳಲ್ಲಿ ಲೇಖಕರು ಅನೇಕ ವಿಷಯಗಳನ್ನು ವಿವರಿಸಿದ್ದಾರೆ. ಜನಪದದ ಅಧ್ಯಯನದ ಸ್ವರೂಪ–ವ್ಯಾಪ್ತಿ ಜನಪದ ಮತ್ತು ಇತರ ವಿಜ್ಞಾನಗಳು, ಜನಪದ ಕ್ಷೇತ್ರಕಾರ್ಯ ವಿಧಾನಗಳು, ಸಿದ್ಧಾಂತಗಳು ಮೊದಲ ಭಾಗದಲ್ಲಿವೆ. ಎರಡನೆಯ ಭಾಗದಲ್ಲಿ ಜನಪದದ ಮೂಲಭೂತ ತತ್ವಗಳನ್ನು ಐದು ದೃಷ್ಟಿ ಕೋನಗಳಿಂದ ವಿಶ್ಲೇಷಣೆ ಮಾಡಿದ್ದಾರೆ. ಈ ಎಲ್ಲಾ ಲೇಖನಗಳು ಕೃತಿಕಾರರ ಆಳವಾದ ಅಧ್ಯಯನವನ್ನು ಅವರ ಚಿಂತನ ಶೀಲತೆಯನ್ನು ಓದುಗರಿಗೆ ಮನದಟ್ಟು ಮಾಡಿಕೊಡುತ್ತೇವೆ. ತಾವು ಓದಿದ್ದನ್ನು ಕನ್ನಡದಲ್ಲಿ ಬರವಣಿಗೆ ಕೆಲವು ಕಿಷ್ಟವಾಗುತ್ತೇದೆ. ಉದಾ: ಆ ಇವುಗಳ ಹುಟ್ಟು ರೂಪಣ ಸ್ಥಿರೀಕರಣ ಮತ್ತು ಚಲಾವಣೆಗಳಿಗೆ ಕಾರಣವಾದ ಸಾಮಾಜಿಕ ನಿರ್ಬಂಧ ಶಕ್ತಿಗಳು ಯಾವುವು ಇಂಥ ಸಾಲುಗಳಲ್ಲಿ

ಅಲ್ಲಲ್ಲಿ ತಲೆ ಹಾಕುವ ದೋಷವನ್ನು ಬಿಟ್ಟರೆ ಈ ಕೃತಿ ತುಂಬ ಉಪಯುಕ್ತವಾದದು ಎನ್ನುಬಹುದು.

ಜನಪದ ಸಮುಖ್ಯೃಖ ಕರ್ನಾಟಕ ಜನಪದ ವಿವಿಧ ವಿಷಯಗಳ ಸ್ಪರ್ಷ ಇಲ್ಲಿದೆ. ದೇವರು ಗುಡ್ಡದ ಮೈಲಾರ ಲಿಂಗ ಎನ್ನುವ ಲೇಖನ ಈ ದೇವತೆಯನ್ನು ಹಲವು ನಿಟ್ಟಿನಿಂದ ಅಧ್ಯಯನ ಮಾಡಿದ್ದ ಫಲ. ಜನಪದ ಕಲೆಗಳು ಮತ್ತು ಶರಣರು ಕುತೂಹಲಕರ ಮಾಹಿತಿಗಳನ್ನು ಸಣ್ಣಾಟಗಳನ್ನು ಕುರಿತು ಬರೆಯುದಾಗ ಜನಪದ ಮೂಲ ತತ್ವಗಳು ಕೃತಿಯ ಕೆಲವು ವಿಚಾರಗಳನ್ನು ತಿಳಿಸಿಲಾಗಿದೆ. ಜನಪದ ಸಿದ್ಧಾಂತದ ಬಗ್ಗೆ ದೇವೇಂದ್ರ ಕುಮಾರ ಹಕಾರಿರವರು ಅಧಿಕಾರವಾಣಿ ಇವರ ಬರವಣಿಗೆಯ ಒಂದು ಪುನರ್ ಉದಾಹರಣೆ ಇವರ ಕೃತಿಗಳಲ್ಲಿ ಸಂಬಂಧ ಇರುವ ವಿಷಯ ಕಾಣಲಾಗಿದೆ.

'ಚಿತ್ರದುರ್ಗಜಿಲ್ಲೆಯ ಜನಪದ ಕ್ರೀಡೆಗಳು' ಎಂಬ ಕೃತಿಯಲ್ಲಿ ಲೇಖಕರಾದ ನಿರಂಜನಮೂರ್ತಿ.ಟಿ ಸಂಶೋಧನೆಗೆ ಸಂಬಂಧಪಟ್ಟಂತೆ ಸಮಗ್ರ ಮಾಹಿತಿ ಈ ಪ್ರಬಂಧದಲ್ಲಿ ಅಳವಡಿಸಿ ಕೊಳ್ಳಲಾಗಿದೆ. "ಭೌಗೋಳಿಕ ಪರಿಸರ ಮತ್ತೊಂದು ಪ್ರದೇಶದಲ್ಲಿ ಮಾನವನ್ನು ನೆಲೆ ನಿಲ್ಲಲು ಆ ಪ್ರದೇಶದಲ್ಲಿ ಹುಟ್ಟಿ ಹರಿಯುವ ನದಿಗಳು ನದಿಬಯಲು, ತೀರಪ್ರದೇಶ, ಪರ್ವತ ಶ್ರೇಣಿ, ಬೆಟ್ಟಗುಡ್ಡ ಮಣ್ಣಿನರಚನೆ ಹವಾಗುಣ, ಸಂಪತ್ತು ಮುಂತಾದ ಭೌಗೋಳಿಕ ಅಂಶಗಳು ಕಾರಣವಾಗಿರುವುದನ್ನು ತಿಳಿಸಲಾಗಿದೆ" ಚಿತ್ರದುರ್ಗಜಿಲ್ಲೆಯ ಏಕೈಕ ನದಿ ವೇದಾವತಿ ನದಿಯು ಹರಿಯುತ್ತದೆ. ಇಲ್ಲಿನ ಜಲ ಸಂಪತ್ತು ಕೆಲವು ಸಣ್ಣಹಳ್ಳಗಳು ಹರಿದು ಉಪನದಿಗಳಿಗೆ ಸೇರುತ್ತೇವೆ. ಅಂತಹ ಉಪಹಳ್ಳಗಳಾದ ಗರಣಿ ಹಳ್ಳ ಹಾಗೂ ನಾಯಕನ ಹಟ್ಟಿ ಹಳ್ಳಗಳೂ ಈ ವೇದಾವತಿ ನದಿಗೆ ಸೇರುತ್ತೇವೆ. ನದಿ ಹಳ್ಳ,

ಮೀರಾಸಾಭಿಹಳ್ಳಿ ಶಿವಣ್ಣ, 'ದುರುಗ ಜಾನಪದ' ಕೃತಿಯಲ್ಲಿ ಹೊಸದುರ್ಗ ಭಾಗ ಜನಪದ ಕಲೆಗಳನ್ನು ಇಂದಿಗೂ ಉಳಿಸಿಕೊಂಡು ಜನಪ್ರಿಯಕಲೆ ನಂದಿಧ್ವಜ, ಕಣಿತ, ವೀರಗಾಸೆ ಕುರುಬ ಜನಾಂಗ ಹೆಚ್ಚಾಗಿರುವ ಡೊಳ್ಳಿನ ಕುಣಿತದೊಂದಿಗೆ ವಿಶಿಷ್ಟವಾದ ದೋಣಿ ಸೇವೆ ಸಂಪ್ರದಾಯ ಹೆಚ್ಚು ಪ್ರಚಲಿತ ಇದೆ. ಜನಪದ ಕಲಾ ಪ್ರಕಾರದಲ್ಲಿ ಅತ್ಯಂತ ಜನಪ್ರಿಯ ಕಲೆ ಬಯಲು ನಾಟಕ ಇದನ್ನು ಕೆಲವರು ಯಕ್ಷಗಾನ ಪಡುವಲಪಾಯದ ಸೂಕ್ಷ್ಮತೆ ಮತ್ತು ಮೂಡಲಪಾಯದ ಹಳೆಯ ನಾಟಕ ರೂಪದ ಮೂಲ ಲಕ್ಷಣಗಳನ್ನು ಗುರುತಿಸುವುದಕ್ಕಿಂತ ಬಯಲಾಟ ಎಂಬ ಸಹಜ ಹೆಸರಿನಿಂದಲೇ ಕರೆಯುವುದೇ ಹೆಚ್ಚು ಸೂಕ್ತವೆನಿಸುತ್ತದೆ. ಜಾಜೂರು ಗ್ರಾಮದ ಜನಪದ ಕಲೆಗಳು ಇಂದಿಗೂ ಜೀವಂತಿಯಾಗಿ ಉಳಿದಿರುವುದು ಪ್ರಮುಖ ಕಲೆಗಳಾದ ರಾಮಪಟ್ಟಿ ಬುಗುರಿ ಆಟ, ಲಗೋರಿ ಆಟ) ಗಂಗೆತ್ತಿನಾಟ ಎಂದು ಪ್ರಸಿದ್ಧವಾದ ಕೋಲೆ ಬಸವನಾಟ ಮಂಡರು, ಎಣ್ಣೆ ಜೋಗಿಗಳೂ ಈ ಭಾಗದಲ್ಲಿ ಗುರುತಿಸಲಾಗಿದೆ.

ಅಂಬಳಿಕೆ ಹಿರಿಯಣ್ಣ 'ಕಾಡುಗೊಲ್ಲರ ಜನಪದ ಗೀತೆಗಳು' ಕೃತಿಯಲ್ಲಿ ಸಂಗ್ರಹಿಸಿದ ಗೀತೆಗಳಲ್ಲಿ ಕಾಡುಗೊಲ್ಲರ ಕುರುಹುಗಳು ಮತ್ತು ಅವರ ದೈವುಗಳಾದ ಚಿತ್ತಯ್ಯ ಕ್ಯಾತಪ್ಪ ಚಿತ್ತಪ್ಪ ದೇವರುಗಳ ಕುರಿತಾಗಿ ತ್ರಿಪದಿ ರೂಪದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಈ ಗೀತೆಗಳು ಸಮುದಾಯದ ಜೀವನದ ಸ್ಥಿತಿಗಳನ್ನು ತಿಳಿಯಲು ಸಹಾಯಕವಾಗಿದೆ.

ರಾಜಣ್ಣ ಆರ್ 'ನಾಯಕ ಜನಾಂಗದ ಇತಿಹಾಸ'ಕೃತಿಯಲ್ಲಿ ಮ್ಯಾಸಬೇಡರು ದೃಢಕಾಯರು ಬರಕಾಲದಲ್ಲಿ ನಡೆಯುವ ಉಡುಪಿನ ಬಗ್ಗೆ ಗಂಡಸರು ಚಡ್ಡಿ ಚಲ್ಲಣ ತಲೆಗೆ ರೂಮಲ್ಲು ಸ್ತ್ರೀಯರು ಸೀರೆ ಮಾತ್ರ ಹುಟ್ಟು ಸೆರಗಿನಿಂದ ಎದೆ ಮುಚ್ಚಿಕೊಳ್ಳುತ್ತಿದ್ದು ಪಶು ಪಾಲನೆ ಮತ್ತು ಬೇಸಾಯವನ್ನು ಜೀವನೋಪಾಯ ಮಾಡಿಕೊಂಡಿರುವರೆಂದು ತಿಳಿಸುತ್ತಾರೆ. ಇವರು ಪೆಟ್ಟಿಗೆ ದೇವರುಗಳನ್ನು ಪೂಜಿಸುತ್ತಾರೆ ಗುಗ್ಗರಿ ಹಬ್ಬ ಮತ್ತು ಎತ್ತಿನ ಹಬ್ಬದಲ್ಲಿ ಪೆಟ್ಟಿಗೆ ದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆಂದು ಪ್ರಸ್ತಾಪಿಸುತ್ತಾರೆ ಇಂತಹದ ಆಚರಣೆಗಳು ಎಂದು ಜನಪದರಲ್ಲಿ ಕಾಣಬಹುದಾಗಿದೆ.

ಮುತ್ತಯ್ಯ ಎಸ್.ಎಂ. 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳು ಪರಂಪರೆ ಆಧುನಿಕತೆ' ಕೃತಿಯಲ್ಲಿ ಬುಡಕಟ್ಟು ಅಧ್ಯಯನ ಸಂಪುಟದ ಈ ಲೇಖನವನ್ನು ಚರ್ಚಿಸಿದಾಗ ಚಿತ್ರದುರ್ಗ ಜಿಲ್ಲೆಯ ಮೂರು ಬುಡಕಟ್ಟುಗಳಾದ ಮ್ಯಾಸಬೇಡ ಕಾಡುಗೊಲ್ಲ ಲಂಬಾಣಿ ಈ ಬುಡಕಟ್ಟುಗಳು ಕಾಡಿನ ಬುಡಕಟ್ಟುಗಳಂತಿದ್ದರೆ ಸುಧಾರಿತ ಬುಡಕಟ್ಟುಗಳಾಗಿದ್ದು ಎಸ್.ಟಿ ವಿ.ಟಿ. ಎಸ್.ಸಿ ಸಂವಿಧಾನಾತ್ಮಕವಾಗಿ ಸೇರಿಸುವುದು ಸರಿಯಷ್ಟೇ ಹಲವಾರು ಸಂಶೋಧಕರು ಮೂಲಭೂತವಾಗಿ ಇವುಗಳು ಅಲೆಮಾರಿ ಬುಡಕಟ್ಟುಗಳೆಂದು ದೃಢಪಡಿಸಿದ್ದಾರೆ ಎಂಬುದಾಗಿ ಉಲ್ಲೇಖಿಸುತ್ತಾರೆ.

ಬೆಳವಣಿಗೆಗೆ ಆದ್ಯತೆ ಕೊಟ್ಟಿರುವುದರಿಂದಾಗಿ ಭೂತಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಆಗಿದೆ ಎಂಬುದಾಗಿ ತಿಳಿಸುತ್ತಾರೆ. ಈ ಮೂರು ಸಮುದಾಯಗಳು ಜಾಗತೀಕರಣ ಮತ್ತು ಆಧುನಿಕರಣದಿಂದಾಗಿ ಆಧುನಿಕ ಕಾಲಾವಧಿಗಳು ಅಭಿಪ್ರಾಯ ದಂತೆ ಸಂಪೂರ್ಣ ಬದಲಾವಣೆ ಆಗಿಲ್ಲ ಅವುಗಳಲ್ಲಿ ಕೆಲವು ಅಂಶಗಳು ಮಾತ್ರ ರೂಪಾಂತರಗೊಂಡಿವೆ ಎಂಬುದಾಗಿ ತಿಳಿಸಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಅಂತಹ ಸಿದ್ಧಾಂತರುಗಳು ಹೇಗೆ ಆಧುನಿಕತೆಗೆ ಮುಖಮುಖಿ ಆಗಿವೆ ಎಂಬುದನ್ನು ಗುರುತಿಸುವುದೇ ಆಗಿದೆ.

ಕೃಷ್ಣಮೂರ್ತಿ ಹಾವನೂರು ಕತ್ತಲುದಾರಿ ದೂರ ಮತ್ತು ಜನಪದ ವೀರ ಗೀತೆಗಳು ೧೯೮೨ ಕತ್ತಲದಾರಿ ದೂರ ಕೃತಿಯನ್ನು ಪರಮಶಿಸಿದಾಗ ಗೊಲ್ಲ ಜನಾಂಗದ ಮಹಾಸತಿಯರ ಬಗ್ಗೆ ಮಾಹಿತಿ ಎದ್ದು ಗೊಲ್ಲ ಜನಾಂಗದವರು ತಮ್ಮ ಜನಾಂಗದ ವರ್ಷದ ದೃಷ್ಟಿಯಿಂದ ಕಾಡುಗೊಲ್ಲರ ಹೆಣ್ಣು ಮಕ್ಕಳಿಗೆ ಪಾದಿರುತ್ತೆ ಪರೀಕ್ಷಿಸುವಂಥದ್ದು ಮತ್ತು ಅದನ್ನು ಆಚರಿಸುವುದು ಅವರಿಗೆ ಕಡ್ಡಾಯವಾಗಿದೆ ಕಾಟಮ್ಮ ಅವರನ್ನು ಪರಿಚಯಿಸಿದರೆ ಜನಪದ ವೀರ ಗೀತೆಗಳು ಮತ್ತು ಕುಂಚಿಟಿಗ ಸಮುದಾಯದ ವೀರ ಕುರಿತಾಗಿ ಕಥೆ ಗೀತೆಗಳಾಗಿವೆ ಜನಾಂಗಗಳ ಆಚರಣೆಗಳ ಸಾಮ್ಯತೆಗಳನ್ನು ಈ ಕೃತಿಯು ತಿಳಿಸುತ್ತದೆ.

## ಸ್ತ್ರೀ ಸಂವೇಧನೆಗಳು

ಪ್ರಾಚೀನಕಾಲದಿಂದ ಪ್ರಚಾರದಲ್ಲಿದ್ದ ಕಥೆಗಳನ್ನು ಪುರಾಣ ಒಳಗೊಂಡಿರುತ್ತದೆ. ಇದಕ್ಕೆ ಆಂಗ್ಲಭಾಷೆಯಲ್ಲಿ ಒಥಿಣಜಡಿಥಿ, ಒಥಿಣಖ ಎಂದರೆ, ಗ್ರೀಕ್‌ನಲ್ಲಿ ಒಥಿಣಖಆ ಎನ್ನುವರು. ಇವೆಲ್ಲದರ ಅರ್ಥ ಹೇಳಿದ ಸಂಗತಿ, ರಹಸ್ಯಮಯ, ಗೂಢವಾದದು ಎಂದು. ದೇವತೆಗಳು, ಭೂಮಿ, ಸೂರ್ಯ–ಚಂದ್ರ, ನಕ್ಷತ್ರ, ಆಕಾಶ, ಪ್ರಾಣಿ, ಪಕ್ಷಿ, ಮಾನವರು ಮುಂತಾದವುಗಳ ಸೃಷ್ಠಿಯನ್ನು ಕುರಿತು ಹೇಳುವುದೇ ಪುರಾಣಗಳು, ಲುವಿಸ್ ಸ್ಪೆನ್ಸರು ಅವರು ಪುರಾಣಗಳ ಬಗ್ಗೆ ಹೇಳುತ್ತ 'ಪುರಾಣ ಯಾವುದೆಂದು ಕಟ್ಟುನಿಟ್ಟಾಗಿ ಹೇಳುವುದಾದರೆ ಒಂದು ವಿಧಿಕ್ರಮದ ವರ್ಣನೆ, ಅದರ ಆಚರಣೆಗೆ ಸಂಬಂಧಿಸಿದ ಪುರಾಣ ಕಥೆಯ ನಿರೂಪಣೆಯಾಗಿದೆ' ಎಂದಿದ್ದಾರೆ. ಅಂದರೆ ನಮ್ಮಲ್ಲಿ ಆಚರಣೆಗೊಳ್ಳುತ್ತಿರುವ ಧಾರ್ಮಿಕ ವಿಧಿಕ್ರಮಗಳೊಡನೆ ಪುರಾಣಗಳು ಸೃಷ್ಟಿಯಾಗಿ ನಿಸರ್ಗದ ಶಕ್ತಿಗಳನ್ನು ದೇವತೆಗಳ ರೂಪದಲ್ಲಿ ಚಿತ್ರಿಸಲು ಪುರಾಣಕಥೆಗಳು ಸಹಾಯಕವಾಗುತ್ತವೆ. ಎಂಬ ಅಭಿಪ್ರಾಯವನ್ನು ಲುವಿಸ್ ವ್ಯಕ್ತಪಡಿಸಿದ್ದಾರೆ.

ಕೆಲ ಇತಿಹಾಸದ ವಿಷಯಗಳು ಪುರಾಣಕಥೆಗಳ ಉಗಮಕ್ಕೆ ಪ್ರೇರಕವಾಗುತ್ತವೆ. ಪರಂಪರಗತವಾಗಿ ನಡೆದ ಸಂಗತಿಗಳೇ

ಕ್ರಮಾನುಗತವಾಗಿ ಪುರಾಣಗಳಾಗಿ ಮಾರ್ಪಡಾಗುತ್ತವೆ. ಇದರಲ್ಲಿ ಕೆಲವೊಮ್ಮೆ ಕಲ್ಪನಾತ್ಮಕ ಕಥೆಗಳು ಸೇರಿರುತ್ತವೆ. ಪುರಾಣಗಳು ಕೆಲವೊಮ್ಮೆ ವಿಚಿತ್ರವೆನಿಸಿದರೂ ಅರ್ಥಹೀನವಾಗಿರುವುದಿಲ್ಲ. ಅವು ಸಂಕೀರ್ಣತೆಯ ಜೊತೆಗೆ ಜಟಿಲವೂ ಆಗಿರುತ್ತವೆ. ಪ್ರಾಣಿ, ಸಸ್ಯ, ಮಾನವ ಈ ಮೂರರ ಸಮನ್ವಯತೆಯಿಂದ ಪುರಾಣ ಹುಟ್ಟುತ್ತದೆ. ಪುರಾಣಸೃಷ್ಟಿಗೆ ಭೌತಿಕ ಆಧಾರಗಳು ಬೇಕಿಲ್ಲ. ನಂಬಿಕೆ, ಶ್ರದ್ಧೆ, ಮೌಲ್ಯ, ಆದರ್ಶಗಳು ಮಾತ್ರ ಕಾರಣವಾಗುತ್ತವೆ. ಆದ್ದರಿಂದ ರಾಮಾಯಣ, ಮಹಾಭಾರತ ಎಂಬ ಪುರಾಣಗಳು ನಮ್ಮ ದೇಶದ ಮಹಾಕಾವ್ಯಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.

ಪುರಾಣಗಳು ಕೇವಲ ಶಿಷ್ಟದೈವಗಳ ಸೃಷ್ಟಿಯಲ್ಲಿ ಮಾತ್ರ ಇರದೆ ಗ್ರಾಮದೇವತೆಗಳ ಹುಟ್ಟು, ಬೆಳವಣಿಗೆಯ ಬಗ್ಗೆಯೂ ತಮ್ಮ ಅಸ್ತಿತ್ವವನ್ನು ಮೂಡಿಸಿವೆ. ಗ್ರಾಮದೇವತೆಗಳ ಬಗೆಗೆ ಅನೇಕ ಮೂಲಗಳಿಂದ ಮಾಹಿತಿ ದೊರೆಯಬಹುದಾದರೂ ಶಾಸನಗಳಲ್ಲಿ ಅಷ್ಟಾಗಿ ಗ್ರಾಮದೇವತೆಗಳ ವಿಷಯಗಳು ದೊರೆಯುವುದಿಲ್ಲ. ಪುರಾಣಗಳು ಸಾಮಾನ್ಯ ಮನುಷ್ಯನಿಗೂ ಮತ್ತು ದೈವಕ್ಕೂ ಇರುವ ವ್ಯತ್ಯಾಸವನ್ನು ಅರ್ಥೈಸಲು ಸಹಕಾರಿಯಾಗುತ್ತವೆ. ಆದ್ದರಿಂದಲೇ ಹಲವಾರು ದೈವಗಳ ಕುರಿತ ಪುರಾಣಗಳು ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಜನ್ಮತಾಳಿರುತ್ತವೆ.

ಪುರಾಣಗಳಷ್ಟೇ ಮಹತ್ವವನ್ನು ಐತಿಹ್ಯಗಳು ಸಹ ಪಡೆದಿರುತ್ತವೆ. ಆದರೆ ಐತಿಹ್ಯಗಿಂತ ಪುರಾಣ ಪ್ರಾಚೀನವಾಗಿರುತ್ತದೆ. ಐತಿಹ್ಯಗಳು ಒಂದು ನಾಡಿನ ಹಾಗೂ ಒಂದು ಗುಂಪಿನ ದೇವತೆಯ ಉಗಮದ ಇತಿಹಾಸವನ್ನು ತಿಳಿಸುತ್ತವೆ. ಐತಿಹ್ಯಗಳೆಂಬುವು ಅಸ್ತಿತ್ವದಲ್ಲಿರುವ ಅಥವಾ ಇದ್ದ ಒಂದು ಸ್ಥಳ ಅಥವಾ ವ್ಯಕ್ತಿಯನ್ನು ಕುರಿತ ಮಾಹಿತಿಗಳಾಗಿವೆ. ಸ್ಥಳ, ವ್ಯಕ್ತಿ, ದೇವತೆಗಳಿಗೆ ಏಕೆ ಮಹತ್ವದ ಸ್ಥಾನ ದೊರೆತಿದೆ ಎಂಬುದನ್ನು ಇವು ವಿವರಿಸುವುದರ ಜೊತೆಗೆ ಈ ಕಾರಣದಿಂದಲೇ ಇವು ಪ್ರಖ್ಯಾತಿ ಹೊಂದಿವೆ. 'ಐಜರಂಜಟಿಜ' ಎಂಬುದಕ್ಕೆ ಸಂವಾದಿಯಾಗಿ 'ಐತಿಹ್ಯ ಎಂಬ ಪದ ಬಳಸಲಾಗುತ್ತದೆ. ಈ ಐತಿಹ್ಯಗಳ ಮೂಲಕವೇ ವ್ಯಕ್ತಿಗಳು, ಒಂದು ಪ್ರದೇಶ, ಘಟನೆ ಚಿರಂಜೀವಿಯಾಗಿ ಉಳಿಯುತ್ತವೆ. ಈ ಐತಿಹ್ಯಗಳನ್ನು ಕುರಿತು 'ಫ್ರೆಡ್ರಿಕ್‌ರಾಂಕ್' ಅವರು ಐತಿಹ್ಯವು ತಾನು ಸತ್ಯವೆಂದು ಹೇಳಿಕೊಂಡರೂ ವಸ್ತುನಿಷ್ಠ ದೃಷ್ಟಿಯಿಂದ ಅದು ಅಸತ್ಯವಾಗಿಯೇ ಇರುತ್ತವೆ' ಎಂದಿದ್ದಾರೆ. ಅಂದರೆ ಐತಿಹ್ಯದಲ್ಲಿ ನಂಬಲಾರ್ಹವಾದ ವಿಷಯಗಳಿದ್ದರೂ ಕೆಲವು ಬಾರಿ ಸತ್ಯಕ್ಕೆ ಸ್ವಲ್ಪದೂರವೂ ಆಗಿರುತ್ತವೆ ಎಂಬ ಭಾವ ರಾಂಕ್ ಅವರ ಮಾತಿನಲ್ಲಿ ವ್ಯಕ್ತವಾಗಿದೆ. ಐತಿಹ್ಯಗಳು ನಡೆದ ಘಟನೆಗಳ ನಿರೂಪಣೆಯೇ ಆಗಿವೆ. ಈ ಘಟನೆಗಳ ನಿರೂಪಣೆಯ ಉದ್ದೇಶ ಮನೋರಂಜನೆ ಮಾತ್ರವಲ್ಲ ಸಮಕಾಲೀನ ಬದುಕಿಗೆ ಮಹತ್ವವನ್ನು ನೀಡುವುದು. ಇದನ್ನು ವರ್ತಮಾನದೊಂದಿಗೆ ಆನ್ವಯಿಸಿಕೊಂಡು ಅದರ ಮೌಲ್ಯಗಳನ್ನು ಒಪ್ಪಿಕೊಳ್ಳುವ ಪ್ರಯತ್ನವಾಗಿರುತ್ತದೆ. ಇದರಲ್ಲಿ ಆಯಾಯಾ ಪ್ರದೇಶಗಳ ಹಿನ್ನಲೆ, ಸೇರಿರುವುದರಿಂದ ಯಾರು ಎಲ್ಲಿ ಬೇಕಾದರೂ ಐತಿಹ್ಯಗಳನ್ನು ಸೃಷ್ಟಿಸಲು ಸಾಧ್ಯವಾಗುವುದಿಲ್ಲ.

ಐತಿಹ್ಯಗಳಲ್ಲಿ ಕೆಲವು ಸಾರಿ ನಾಟಕೀಯತೆಯೊಂದಿಗೆ ಅತಿಮಾನುಷತೆಯೂ ಕೂಡಿರುತ್ತದೆ. ಐತಿಹ್ಯಗಳ ಸೃಷ್ಟಿಗೆ ಭೌತಿಕ ಆಧಾರಗಳು ಸಹ ಅಗತ್ಯವಾಗಿರುತ್ತವೆ. ಐತಿಹ್ಯಗಳ ಬಗ್ಗೆ ತಿಳಿಸುತ್ತ ವಸಂತಕುಮಾರ ತಾಳ್ತಜೆ ಅವರು "ಎಲ್ಲೋ, ಎಂದೋ, ಘಟಿಸಿದ ಘಟನೆ, ಸ್ಥಳ, ವ್ಯಕ್ತಿಗಳ ಮೇಲೆ, ಅಲ್ಲಿನ ಪರಿಸರ ಬೀರಿದ ಪ್ರಭಾವವೇ ಐತಿಹ್ಯಗಳು ಸೃಷ್ಟಿಯಾಗಲು ಕಾರಣ ಎಂದು ತಿಳಿಸಿದ್ದಾರೆ", ಸ್ಥಳೀಯ ನೆಲೆಗಟ್ಟಿನ ಮೇಲೆ ಐತಿಹ್ಯಗಳು ಸೃಷ್ಟಿಯಾಗಿ ಆ ಹಿನ್ನಲೆಯಲ್ಲಿಯೇ ಪ್ರಸಿದ್ಧಿಯನ್ನು ಪಡೆದಿರುತ್ತವೆ. ಆದ್ದರಿಂದಲೇ ಐತಿಹ್ಯಗಳು ಮಹತ್ವವನ್ನು ಪಡೆದಿವೆ.

ಐತಿಹ್ಯಗಳು ಕೇವಲ ಒಂದೇ ಪ್ರದೇಶಕ್ಕೆ ಸೀಮಿತವಾಗಿರುತ್ತವೆಂದು ಹೇಳಲು ಸಾಧ್ಯವಿಲ್ಲ ಅಂತೆಯೇ ಅವುಗಳು ಎಲ್ಲೆಡೆಯೂ ಕಂಡುಬರುವುದಿಲ್ಲ. ಮೀಸಲಾಗಿದ್ದರೆ ಮತ್ತೊಮ್ಮೆ ಬೇರೆಡೆಗೆ ಪಲಾಯನ ಮಾಡಿರುತ್ತವೆ. ಹೀಗೆ ಬೇರೆಡೆಗೆ ಹೋದ ಮಾತ್ರಕ್ಕೆ ಪೂರ್ಣವಾಗಿ ವಲಸೆ ಹೋಗದೇ ಮೂಲಸ್ಥಳದ ಐತಿಹ್ಯಕ್ಕೂ ಇವಕ್ಕೂ ಕೆಲವು ವ್ಯತ್ಯಾಸವಿರುತ್ತವೆ. ಐತಿಹ್ಯಗಳಿಗೆ ಇತಿಹಾಸದೊಂದಿಗೆ ಕೆಲವೊಮ್ಮೆ ಸಂಬಂಧವಿರುತ್ತದೆ. ಇವು ಪೂರ್ಣಕಾಲ್ಪನಿಕವೂ ಅಲ್ಲ. ಪೂರ್ಣ ಪುರಾಣದಂತೆಯೂ ಇರದೇ ಪ್ರತ್ಯೇಕವಾಗಿ ನಿಲ್ಲುತ್ತವೆ. ಇದು ಅಸಾಮಾನ್ಯ ಘಟನೆಯನ್ನು ಸತ್ಯವೆನ್ನುವ ರೀತಿಯಲ್ಲಿ ಕಂಡರಿಸುತ್ತದೆ. ಐತಿಹ್ಯಗಳು ಮನುಷ್ಯನ ಆಲೋಚನೆ, ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾಗುವ ಸಾಧ್ಯತೆಗಳಿರುತ್ತವೆ. ಇದರಿಂದ ಮೂಲ ಐತಿಹ್ಯಗಳು ಒಳಗೊಂಡಿದ್ದ ವಿವರಗಳು ಹಾಗೂ ಸಂದೇಶಗಳಲ್ಲೂ ಮಾರ್ಪಾಡಾಗಿ ಮೂಲ ಸಂದೇಶದಲ್ಲಿ ವೈಪರೀತ್ಯಗಳು ಗೋಚರವಾಗಬಹುದು.

ಪ್ರತಿಯೊಂದು ಗ್ರಾಮಗಳಲ್ಲೂ ಗ್ರಾಮದೇವತೆಗಳು ನೆಲೆಯೂರಿ ಹಾಸುಹೊಕ್ಕಾಗಿರುತ್ತವೆ. ಆದ್ದರಿಂದ ಜನಪದರು ತಮ್ಮ ಅನುಭವಗಳನ್ನು ಒಟ್ಟಾರೆಯಾಗಿ ಸಂಗ್ರಹಿಸಿ ಗ್ರಾಮದೇವತೆಗಳಿಗೆ ಸಂಬಂಧಿಸಿದ ಪುರಾಣ–ಐತಿಹ್ಯ–ಜನಪದಕಥೆಗಳನ್ನು ರಚಿಸಿಕೊಂಡಿರುತ್ತಾರೆ. ಇವು ಪೂರ್ಣ ಸತ್ಯವೂ ಅಲ್ಲದ ಮಿಥ್ಯವೂ ಅಲ್ಲದ ರೀತಿಯಲ್ಲಿ ಜನರ ಮಧ್ಯೆ ಬೆರೆತುಕೊಂಡಿರುತ್ತವೆ. ಎಲ್ಲ ದೇವತೆಗಳ ಆಚರಣೆಗೆ ಐತಿಹ್ಯಗಳಷ್ಟೇ ಮುಖ್ಯವಾಗಿರುವುದಿಲ್ಲ. ಆ ಗ್ರಾಮದೇವತೆಗಳ ಬಗ್ಗೆ ಜನರು ಇಟ್ಟಿರುವ ನಂಬಿಕೆ ಭಕ್ತಿರೂಪ ಪಡೆದಿರುತ್ತವೆ. ಆದರೆ ಐತಿಹ್ಯಗಳು ಪುರಾಣಕ್ಕಿಂತಲೂ ಭಿನ್ನವಾಗಿದ್ದು ಐತಿಹ್ಯವು ಇತಿಹಾಸದ ವಸ್ತುವನ್ನು ಒಳಗೊಂಡಿದ್ದು ವ್ಯಕ್ತಿ, ಊರು, ಘಟನೆಗಳನ್ನು ವಿವರಿಸುತ್ತದೆ.

'ಶಿಷ್ಟ ಸಂಸ್ಕೃತಿ ಪುರಾಣವಾದರೆ, ಜನಪದ ಸಂಸ್ಕೃತಿ ಐತಿಹ್ಯದ ರೂಪ ಪಡೆದಿರುತ್ತದೆ. ಪುರಾಣಗಳು ಪ್ರಬುದ್ಧ ಮನಸ್ಸಿನ ಸೃಷ್ಟಿ, ಐತಿಹ್ಯಗಳು ನಿತ್ಯ ಬದುಕಿನ ಸ್ಥಳೀಯ ಮಾಹಿತಿಯನ್ನು ತಿಳಿಸುತ್ತವೆ. ಇವೆರಡರ ನಡುವೆ ಕೊಡುಕೊಳ್ಳುವಿಕೆ ಅನೇಕ ಕಾಲಗಳಿಂದಲೂ ನಡೆಯುತ್ತಲೇ ಇದೆ. ಆದರೂ ಪುರಾಣ ಮತ್ತು ಐತಿಹ್ಯಗಳ ನಡುವೆ ಭಿನ್ನತೆ ಇದ್ದೇ ಇರುತ್ತದೆ. ಪುರಾಣ ಮತ್ತು ಐತಿಹ್ಯಗಳಲ್ಲಿ ಕೆಲ ಮೂಲ ವ್ಯತ್ಯಾಸಗಳನ್ನು ಇಲ್ಲಿ ಗುರುತಿಸಬಹುದು. ಪುರಾಣಗಳು ಗದ್ಯಾತ್ಮಕವಾದ, ಪರಿಮಿತ ಪಾಠಾಂತರಗಳನ್ನೊಳಗೊಂಡ ನಿರ್ದಿಷ್ಟ ಸ್ಥಳಕ್ಕೆ ಅಂಟಿಕೊಂಡಿರುವ, ವಿಶಿಷ್ಟ ಸ್ವರೂಪದ ಮನೋಜ್ಞ ಕಥಾನಕ, ಐತಿಹ್ಯವೆಂದರೆ ಕೇವಲ ಸ್ಥಳಕಷ್ಟೇ ಅಲ್ಲ, ವ್ಯಕ್ತಿ ಅಥವಾ ಘಟನೆಯೊಂದನ್ನು ಕುರಿತಂತೆ ಸಂಪ್ರದಾಯಿಕ ಮೂಲವಸ್ತುಗಳೊಡನೆ ನಿಜಾಂಶವೊಂದರ ಮೇಲೆ ಆಧಾರವಾಗಿದೆ ಎಂದು ಭಾವಿಸುವ ಕಥೆಯಾಗಿದೆ. ಆದ್ದರಿಂದ ಗ್ರಾಮದೇವತೆಗಳನ್ನು ಕುರಿತ ಪುರಾಣ ಮತ್ತು ಐತಿಹ್ಯಗಳೆರಡು ಮಹತ್ವವನ್ನು ಪಡೆದು ಆ ಮೂಲಕವೇ ಪ್ರಸಿದ್ಧವಾಗಿವೆ.

ಪ್ರಕೃತಿಯಲ್ಲಿನ ಸೂರ್ಯ, ಚಂದ್ರ, ಕಲ್ಲು, ಮಣ್ಣು, ಅರಣ್ಯಗಳನ್ನು ಕಂಡ ಮಾನವ ಅವುಗಳಿಗೆ ದೈವೀಶಕ್ತಿ ಕೊಟ್ಟಂತೆ ಇನ್ನೂ ಹೆಚ್ಚಿನ ಮಾನ್ಯತೆ ಎಲ್ಲರಿಂದಲೂ ದೊರೆತು ಆರಾಧಿಸಲ್ಪಡಲಿ ಎಂಬ ಉದ್ದೇಶದಿಂದ ಈ ರೀತಿಯ ಐತಿಹ್ಯ–ಪುರಾಣಗಳನ್ನು ಸೃಷ್ಟಿಸಿದ್ದಾನೆ. ಅನೇಕ ಜನರು ಇದರಿಂದ ಪ್ರಭಾವಿತರಾಗಿ ಆರಾಧಿಸಬಹುದು. ಹಲವಾರು ತೊಂದರೆಗಳಿಂದ ಬೇಸತ್ತ ಜನರು ಅನೇಕ ದೈವಗಳ ಮೊರೆಹೋಗುವುದು ಸಾಮಾನ್ಯ. ಈ ರೀತಿಯ ಪರಿಸ್ಥಿತಿಯಲ್ಲಿ ಸುತ್ತಮುತ್ತಲ ಅನೇಕ ಜನರಿಂದ ಯಾವುದೋ ದೈವಶಕ್ತಿಯನ್ನು ಈ ಪುರಾಣ–ಐತಿಹ್ಯಗಳಿಂದ ತಿಳಿದು ಆ ದೇವರ ಮೊರೆ ಹೋಗಬಹುದು. ಆದ್ದರಿಂದ ಪುರಾಣ–ಐತಿಹ್ಯಗಳು ದೈವಗಳ ಬಗ್ಗೆ

ನಂಬಿಕೆ ಮೂಡಿಸಲು ಸಹಕಾರಿಯಾಗುತ್ತವೆ. ಇದರಿಂದ ದೈವಗಳು ಹೆಚ್ಚು ಪ್ರಖ್ಯಾತಿಯೂ ಆಗುತ್ತವೆ.

ಐತಿಹ್ಯಗಳಿಗೆ ಜನಪದ ಸಾಹಿತ್ಯ ಪ್ರಕಾರದಲ್ಲಿ ವಿಶಿಷ್ಟ ಸ್ಥಾನಮಾನವಿದೆ. ಈ ಪ್ರಕಾರವು ಎಂದೋ ನಡೆದ ಘಟನೆಗಳನ್ನು ಸಂಗತಿಗಳನ್ನು ಕಥನಗಳ ಮೂಲಕ ಉಳಿಸಿಕೊಂಡು ಬಂದಿದ್ದು ಪ್ರಾಚೀನ ಕಾಲಗಟ್ಟದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ಸಹಕಾರಿಯಾಗಿದೆ.ಐತಿಹ್ಯಗಳು ಬಹುಮುಖ ಸಂಸ್ಕೃತಿಯಾಗಿದ್ದು ಪ್ರಾದೇಶಿಕವಾಗಿ ಮತ್ತು ಸಮುದಾಯ ನಿಷ್ಠ ದೃಷ್ಟಿಯಿಂದ ವಿವಿಧತೆಯನ್ನು ಹೊಂದಿರುತ್ತವೆ. ಸ್ಥಳ ಪ್ರಧಾನ ಐತಿಹ್ಯವು ಆಯಾ ಪ್ರದೇಶದ ಸಾಂಸ್ಕೃತಿಕ ಹಿನ್ನೆಲೆಯ ಕುರಿತಾಗಿದ್ದು ಅಲ್ಲಿನ ಸಾಮಾಜಿಕ ಸಂಗತಿಗಳನ್ನು ಒಳಗೊಂಡಿರುವುದು.

ವೇದಾವತಿ ನದಿ ತೀರದಲ್ಲಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿ ಬೆಳೆದುಬಂದಿದೆ.ಕಲೆ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಮತ್ತು ರಾಜಕೀಯಗಳಿಂದ ಆರ್ಥಿಕತೆಯಿಂದ ಸಾಮಾಜಿಕ ಅಂಶಗಳು ಅಗತ್ಯತೆ ಅನುಗುಣವಾಗಿ ಬೆಳೆದಿದೆ.ಒಂದು ಸ್ಥಳದ ಭೌಗೋಳಿಕ ವೈಶಿಷ್ಟ್ಯ ಅಸಾಮಾನ್ಯತೆಯನ್ನು ಗಮನಿಸಿಕೊಂಡು ಸ್ಥಳ ಐತಿಹ್ಯಗಳು ಹುಟ್ಟಿಕೊಂಡಿರುತ್ತೇವೆ. ಇವು ಸ್ಥಳ ಮಹಿಮೆ ವ್ಯಕ್ತಿ ವಿಶೇಷಗಳು ಸಂಪ್ರದಾಯಗಳು ಮತ್ತು ಘಟನೆಗಳನ್ನು ತಿಳಿಸುತ್ತದೆ. ಇವು ಸಂಕ್ಷಿಪ್ತ ರೂಪವಾಗಿದ್ದು ಗದ್ಯಾತ್ಮಕವಾಗಿರುವ ಈ ಸ್ಥಳ ಐತಿಹ್ಯಗಳು ಒಂದು ನಿರ್ದಿಷ್ಟ ಸ್ಥಳ ಬದ್ಧವಾಗಿರುತ್ತದೆ. ವ್ಯಕ್ತಿಗಳೊಂದಿಗೆ ಸ್ಥಳಕ್ಕೆ ಹೆಚ್ಚಿನ ಮಹತ್ವವಿದೆ. ಆದರೆ ಇವು ಹುಟ್ಟಿಕೊಂಡ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಆಸ್ಥಳಕ್ಕೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಗೆ ಸೀಮಿತವಾಗಿರುತ್ತೇವೆ.

**ಕರಿಯಮ್ಮ ದೇವಿತೆ:** ಈ ದೇವಿತೆ ಚಳ್ಳಕೆರೆ ತಾಲ್ಲೂಕು ಪರಶುರಾಂಪರ ಹೋಬಳಿಯ ಜಾಜೂರು ಗ್ರಾಮದಲ್ಲಿ ನೆಲೆಸಿದ್ದಾಳೆ. ಜಾಜೂರು ಗ್ರಾಮದ ಹೊರವಲಯ ಕೆರೆಯಾಚೆಯ ಕರೆಕಲ್ಲು ಬಳಿ ಬಂದು ನೆಲಸಿದ ದೇವಿಯನ್ನು ಗೊಲ್ಲ, ಬೇಡ, ನಾಯಕ, ಕುರುಬ ಸಮುದಾಯದವರು ಹೆಚ್ಚು ಶ್ರದ್ಧಾಭಕ್ತಿಯಿಂದ ಆರಾಧಿಸುತ್ತಾರೆ.

**ಸಣ್ಣಾಕಿ, ದೊಡ್ಡಾಕಿ (ಕರಿಯಮ್ಮ ದೇವತೆ ಪೆಟ್ಟಿಗೆ ದೇವತೆ):** ಈ ದೇಗುಲದಲ್ಲಿ ಸಣ್ಣಾಕಿ, ದೊಡ್ಡಾಕಿಯೆಂಬ ಹೆಸರಿನ ಇಬ್ಬರು ಕರಿಯಮ್ಮ ದೇವಿಯರಿದ್ದಾರೆ. ಈ ಇಬ್ಬರಿಗೂ ಪೂಜೆ ನಡೆಯುತ್ತದೆ. ವಿಶೇಷತೆ ಏನೆಂದರೆ ದೊಡ್ಡಾಕಿ ಊರೊಳಗಿನ ಬುಡ್ಡಕಲ್ಲು ಬಳಿ ಕೇಡಾಗುತ್ತದೆ ಎಂಬುದು ಜನರ ನಂಬಿಕೆ ಹಾಗಾಗಿ ಹಬ್ಬ ಹರಿದಿನಗಳಲ್ಲಿ ಊರೊಳಗೆ ಸಣ್ಣ ಕರಿಯಮ್ಮ (ಉತ್ಸವ ಮೂರ್ತಿ) ಮಾತ್ರ ಪ್ರವೇಶಿಸಿ ಭಕ್ತರ ಸುಖ ಆಲಿಸುತ್ತಾಳೆ. ಕರಿಯಮ್ಮ ದೇವಿ ನಂಬಿದ ಭಕ್ತರನ್ನು ಯಾವತ್ತಿಗೂ ಕೈಬಿಟ್ಟಿಲ್ಲ. ಗ್ರಾಮದಲ್ಲಿ ಕ್ಷಾಮ, ಕಾಲರಾ, ಪ್ಲೇಗು, ಮಳೆ ಬೆಳೆ ಬಾರದ ಸೂಚನೆಗಳಿದ್ದರೆ ಈ ದೇವಿ ಕುರುಹು ತೋರಿಸುವ ಸಂಪ್ರದಾಯವಿದೆ. ಇದೇ ಕರಿಯಮ್ಮ ದೇವಿ ಪಾವಗಡ ತಾಲ್ಲೂಕು ಕೊಂಡೆತಿಮ್ಮನಹಳ್ಳಿ ಬಳಿಯ ಮೂಗದಾಳಬೆಟ್ಟ ಹಾಗೂ ಹೊಳಲ್ಕೆರೆ ತಾಲ್ಲೂಕು ಚಿಕ್ಕಜಾಜೂರು ಗ್ರಾಮದಲ್ಲಿ ಕೂಡ ನೆಲೆ ನಿಂತಿದ್ದಾಳೆ.

**ಉತ್ಸವ ಜಾತ್ರೆ:** ಶ್ರಾವಣ ಮಾಸ, ದಸರಾ, ಯುಗಾದಿ ಹಬ್ಬದ ವೇಳೆ ಊರ ಸಮೀಪದ ವೇದಾವತಿ ನದಿಗೆ ಗಂಗೆ ಪೂಜೆ ಮಾಡಿದ ಬಳಿಕ ಧಾರ್ಮಿಕ ಕಾರ್ಯಗಳಿಗೆ ಚಾಲನೆ ನೀಡಲಾಗುತ್ತದೆ. ಪ್ರತಿ ಮಂಗಳವಾರ, ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ. ಪ್ರತಿ ಮೂರು ವರ್ಷಕ್ಕೊಮ್ಮೆ ಭಕ್ತರು ದೊಡ್ಡ ದೇವರ ಜಾತ್ರೆ, ವಿಧಿವತ್ತಾಗಿ ಮಾಡಿಕೊಂಡು ಸಿಂಗರಿಸಿ ಮಾಡಿ ಪ್ರಮುಖ ಆಚರಣೆಯಾಗಿದೆ. ದೊಡ್ಡ ದೇವರ ಜಾತ್ರೆ ಒಂದು ವಾರ ಕಾಲ ಧಾರ್ಮಿಕ ಕಾರ್ಯಗಳು ಅದ್ದೂರಿಯಾಗಿ ನಡೆಯುತ್ತವೆ. ಜಾತ್ರೆ, ಹಬ್ಬ, ಹರಿದಿನ, ಉತ್ಸವ ವೇಳೆ ದೂರದ ಬೆಂಗಳೂರು, ದಾವಣಗೆರೆ, ನೆರೆಯ ಆಂಧ್ರ ಪ್ರದೇಶದ ಹೈದರಾಬಾದ್, ಅನಂತಪುರ ಜಿಲ್ಲೆಗಳಿಂದ ಕೂಡ ಭಕ್ತರು ಆಗಮಿಸುತ್ತಾರೆ. ದೇವಿ ದರ್ಶನ ಪಡೆದು ಧನ್ಯರಾಗುತ್ತಾರೆ.

**ಆಚರಣೆ:** ಕರಿಯಮ್ಮ ದೇವಿ ಗಂಗಾಪೂಜೆ, ಶುದ್ಧ ಅಮಾಸ್ಯೆದಿನ ದೇವಿಯನ್ನು ಹೊಳೆಗೆ ಪೆಟ್ಟಿಗೆ ಕರಿಯಮ್ಮ ಪಲುಕೆಕರಿಯಮ್ಮ ದೇವಿಯನ್ನು ಮೆರವಣಿಗೆ ಮುಖಾಂತರ ವೇದಾವತಿ ನದಿ ತೀರದಲ್ಲಿ ಊರಿನ ಗ್ರಾಮಸ್ಥಾರು ಎಲ್ಲಾಸೇರಿ ಕಾಳೇ, ಉರುಮೆ ತಪ್ಪಡ ಚೌಡಿಕೆ, ತುಂಬಿ ಹಿಟ್ಟಿನ ಹೂವಿನ ಎಡೆಗೆ, ನೀರು ಕೊಡ, ಹೊಳೆಗೆ ಎರಡು (ಕುರಿಮರಿಗಳು) ಹೊಳೆಮಾರಿ ಪೂಜೆ ದೊಡ್ಡದಾಗಿ ಚಿಲುಮೆ ತೆಗೆದು ದೇವತೆಗಳನ್ನು ಕುಂಡಿಸಿ ಸುತ್ತಾ ತೆರೆಕಟ್ಟೆ (ಅಗಸರ ವಾಡಿಕೆ) ಕಟ್ಟುಬೇಕು ಎಂದು ನಿಯಮ ಇದೆ.

ಚಿಲುಮೆ ತೆಗೆದು ನೀರಿನ ದೇವತೆ ಮೂರ್ತಿಗಳಿಗೆ ಸ್ನಾನಕ್ಕೆ ಸೀಗೆಕಾಯಿ ಪುಡಿ, ಹರಳೆ ಎಣ್ಣೆ ಸ್ನಾನ ನಂತರ ಗಂಗೆಸ್ನಾನ, ಎಲೆ ಅಡಿಕೆ ಕಬ್ಬಿನತುಂಡು ಚಿಗಳ, ಹಸಿ ಅಕ್ಕಿ, ಬಾಳೆಹಣ್ಣು, ಕಡಲೆ ಬೆಳೆ ಹಸಿರು, ದೇವತೆಗಳಿಗೆ ಎಡೆ ಹಾಕುವತ್ತಾರೆ. ದೇವರ ಎಡೆ ಒಂಭತ್ತು ಮತ್ತು ಗಂಗೆ ದೇವತೆ ಐದು ಎಡೆ ಅರಿಸಿಣ ಕುಂಕುಮ ಎರಡು ಗಡಿಗೆ ಕಂಕಣಕಟ್ಟಿರುತ್ತಾರೆ. ಹೊಸ ಉಡುಗೊರೆ ಬಟ್ಟೆ ಕಟ್ಟುವುದು, ಗಂಗಮ್ಮಶಾಸ್ತ್ರ ಪಂಚಾಂಗದವರು ಕರಿಕಂಬಳೆ ಮೇಲೆ ಐದು ಹಿತ್ತಾಳೆ ಚಂಬು ಕಂಕಣ ಕಟ್ಟಿ ತೆಂಗುನ ಕಾಯಿ ಇಟ್ಟು ಮಾವಿನಎಲೆ ಇಟ್ಟು ಶಾಸ್ತ್ರ ಮುಗಿಸುತ್ತಾರೆ. ಆ ನೀರಿನಿಂದ ಪುಣ್ಯ ನೀರು ಎಂದು ಭಾವಿಸುತ್ತಾರೆ. ಪಂಚಾಮೃತ ಕೊಡುತ್ತಾರೆ. ಅದೇವತೆಗಳ ಪೇಟಿಗೆ ತಾಯಿಬಳಿ ಅಲಂಕಾರ ಮಾಡುತ್ತಾರೆ.

ವಾಪಸ್ಸು ಬರುವಾಗ ವೇದಾವತಿ ದಡಕ್ಕೆ ಅತ್ತಿ ಬಂದು ಕುರಿಮರಿ ಕಡಿಯುವುದು ದೈವವೊಡ ಅಲ್ಲಿ ಒಂದು ಕುರಿಮರಿ ಕಡಿಯುವುದು. ಊರಿನೊಳಗೆ ಒಂದು ಭಕ್ತಾಗಳ ಕಷ್ಟ ಸುಖಃ ಕುರುಹು ಮನೆ ತೊಂದರೆ ಸಂತಾನದ ಫಲ ಕುರುಹು, ದನಕರುಗಳು ಕಳೆದು ಹೋದವು. ದೊರೆಕಿಸಿ ಕೊಡುವುದು ಇಲ್ಲಿ ಕಾಣಬಹುದು. ಬುಂಡೆಕಲ್ಲು ಪೂಕೆ ಜನಪದ ಆಚರಣೆ ಎಡೆ ಹಾಕಿ ಕಾಯಿ ಒಡೆದು ಪೂಜೆ ಮಾಡಿ ನಂತರ ಹರಿಜನರ ಕಾಲೋನಿ ಹೋಗಿ ಪೂಜೆ ಮಾಡಿಸಿಕೊಂಡು ನಂತರ ಗುಡಿಹತ್ತಿರ ದೇವತೆ ಭಕ್ತಿಯಿಂದ ಕೇಳಿಸಿಕೊಳ್ಳವುದು ಮಳೆ ಕುರುಹು ಕೇಳುತ್ತಾರೆ. ಗುಡಿಯಲ್ಲಿ ತೂಗಮಂಚದಲ್ಲಿ ಕುಳಿಸಿರುವುದು. ಗೌಡರ ಮನೆಯಲ್ಲಿ ಎಡೆ, ಎಲೆಪೂಜೆ ಮಾಡುತ್ತಾರೆ. ಯುಗಾದಿ ಹಬ್ಬದ ಮೂರು ದಿನ ತೂಗಮಂಚದ ಕುಳಿಸಿರುತ್ತಾರೆ. ದಸರಾ ಹಬ್ಬದಲ್ಲಿ ಹತ್ತು ದಿನ ತೂಗ ಮಂಚದ ಮೇಲೆ ಕುಳಿಸಿರುತ್ತಾರೆ. ಬನ್ನಿಮರದ ಕೆಳಗಡೆ ಕುರಿಸಿ ಪೂಜೆ ಮಾಡುತ್ತಾರೆ.

**ಕರಿಯಮ್ಮ ದೇವತೆ ನೆಲೆಸಿರುವ ಬಗ್ಗೆ ಐತಿಹ್ಯ**

ಭಕ್ತರು ಹೇಳುವ ಪ್ರಕಾರ ದೆಹಲಿಯಿಂದ ಬಂದಳು ಎಂದು ಹೇಳುತ್ತಾರೆ. ಹಿಂದಿನ ಕಾಲದಲ್ಲಿ ವೇದಾವತಿ ತೊರೆ ಭೂಮಿಯ ಕಳೆ ತೆಗೆದು ಬಂದಳೆಂದು ಹೇಳುತ್ತಾರೆ. ಇನ್ನೊಂದು ಪ್ರಕಾರ ಒಬ್ಬ ಮನಷ್ಯನ ಬೇವಿನ ಕೆಳಗೆ ಕುಳಿತಿರುವ ಮನುಷ್ಯನ ಬೇವಿನಸೊಪ್ಪು ಮೇಲೆ ಹಾಕುತ್ತಿದ್ದಾರೆ. ಯಾರು ಎಂದು ಕೇಳಿದ್ದನು ನನ್ನ ಕರಿಯಮ್ಮ ದೇವತೆ ಎಂದು ಹೇಳಿದ್ದಾಳು. ಆಗ ನನಗೆ ಗುಡಿ ಕಟ್ಟಿಸಿಕೊಡಿ ಎಂದು ಹೇಳಿದ್ದಳು ಮತ್ತು ನಿನ್ನೆ ಪೂಜೆ ಮಾಡು ಎಂದು ಹೇಳಿದ್ದಳು. ಪವಾಡಗಳು ಪೆಟ್ಟಿಗೆ ಕರಿಯಮ್ಮ ಬುಡೆಕಲ್ಲು ದಾಟಿ ಊರಿನ ಹೊಳೆಗೆ ಬರುವುದಿಲ್ಲ.

ಹಿಂದಿನ ಕಾಲದ ಪರೀಕ್ಷೆ ಮಾಡುವುದರ ಹಿನ್ನೆಲೆ ಊರಿನ ಹೊಳಗೆ ಹೆಜ್ಜೆ ಇಟ್ಟತಕ್ಷಣ ಊರಿಗೆ ಬೆಂಕಿಬಿತ್ತು ಎಂದು ಹೇಳುತ್ತಾರೆ. ಅವತ್ತಿನಿಂದ ಇಂದಿನ ದಿನಗಳವರೆಗೂ ಊರಿನ ಬುಡೆಕಲ್ಲು ಹಾಕುವುದಿಲ್ಲ. ಸಣ್ಣಾಕ್ಕೆ ಊರಿಗೆ ಎಲ್ಲಾ ಕಡೆ ಹೋಗಿ ಬರುತ್ತಾಳೆ. ಇನ್ನೊಂದು ಪವಾಡದ ಪ್ರಕಾರ ವೇದಾವತಿ ನದಿ ಹೊಳೆ ದಾಟುವುದಿಲ್ಲ. ಅರ್ಧ ಮಾತ್ರ ದಾಟುವುದು ದೇವತೆಯ ವಾಡಿಕೆಯಾಗಿದೆ. ಕರಿಯಮ್ಮ ದೇವಿಯ ಪೂಜಾರಿ ರಾಮಪ್ಪನ ಪವಾಡ ಮೈಲಿಗೆ ತಪ್ಪು ಮಾಡಿದಕ್ಕೆ ಊರಿನ ಜನರಿಗೆ ಹೆದರಿ ಓಡಿ ಹೋಗಿರುತ್ತಾನೆ. ನಂತರ ಊರಿನ ಗ್ರಾಮದ ವ್ಯಕ್ತಿ ಒಂದು ಮನೆಯಲ್ಲಿ ಕೂಡಿ ಹಾಕಿದ್ದಾರೆ. ಅವನ್ನು ದೇವರನ್ನು ನೋಡುವುದಕ್ಕೆ ವೇದಾವತಿ ನದಿತೀರ ತೊರೆಗೆ ಹೋಗಿರುತ್ತದೆ. ಅಲ್ಲಿ ಹೊಳೆಪೂಜೆ ಮಾಡಿ ಬರುವಾಗ ಕಾಮಸಮುದ್ರ ಆರ್ಚಾರಿ ಉಜ್ಜಬುಲ್ಲ ಹೊಳಗೆ ತುಳಿದ ಮೇಲೆ ಬೇರೆ ಮುಖಾಂತರ ದೇವತೆಯನ್ನು ಹೊತ್ತಕೊಂಡು ಬಂದಿದ್ದಾರೆ. ನಂತರ ಆ ಮನೆ ಒಳಗೆ ಕೂಡಿಹಾಕಿರುವ ಪೂಜಾರಿ ಬಾಗಿಲು ಮುರಿದು ದೇವರ ಹತ್ತಿರ ಹೋದನು. ಪಕ್ಕದಲ್ಲಿ ನಿಂತಿದ್ದನು. ಇನ್ನೊಬ್ಬ ತಲೆಯ ಮೇಲಿದ ಕರಿಯಮ್ಮ ದೇವಿಯು ಪೂಜಾರಿ ರಾಮಪ್ಪನ ತಲೆ ಮೇಲೆಯಿಂದ ಹಾರಿ ಕುಳಿತುಕೊಂಡಳು. ಊರಿನ ಜಾತ್ರೆ ಆದಮೇಲೆ ಒಂದು ವಾರದ ಮೇಲೆ ಕೆರೆಯ ಕೋಡಿಬಿದ್ದಿದೆ. ಕೆರೆಯ ಏರಿಮೇಲೆಕ್ಕೆ ಹೋದಾಗ ಗಂಗದೇವತೆ ಮತ್ತೆ ವಾಪಸ್ಸು ಬರುವಾಗ ನಡುಜಾಗದಲ್ಲಿ ನೀರು ಹರಿಯುವ ಕೋಡಿ ಜಾಗದಲ್ಲಿ ಕೋಣ ಕಡಿದರು. ದೇವತೆ ಪೂಜಾರಿ ರಾಮಪ್ಪನಿಗೆ ತಪ್ಪು ಮಾಡಿರುವುದಕ್ಕೆ ಪಕ್ಕೆಲುಬು ಮುರಿದ್ದಳು. ಅನಂತರ ಕೆಳಗೆ ಇಳಿಸಿದ್ದ ಪೇಟಿಗೆ ಗುಡಿ ತಂದರು. ಪೂಜಾರಿ ರಾಮಪ್ಪ ಮಕ್ಕಳ ಹತ್ತಿರ ಎಡೆ ಅನ್ನ ತಿಂದು ಇಲ್ಲಿಗೆ ನನ್ನ ಕರಿಯಮ್ಮ ದೇವಿಯು ಋಣ ಮುಕ್ತವಾಯಿತು ಎಂದು ಪ್ರಾಣಬಿಟ್ಟನು. ಹೊಳೆಯಲ್ಲಿ ಕರಿಯಮ್ಮ ದೇವತೆಯ ಪೂಜೆ ಮೂರುಸುತ್ತು ಮಣೇವು ತಿರುಗುವುದು. ಇಂದಿಗೂ ಹಿಡಿಮುಡಿಯ ಮೇಲೆ ತಿರುಗುವುದು ಇಲ್ಲಿ ಜನಪದಆಚರಣೆಯಾಗಿದೆ. ಭಕ್ತರಪ್ರಸಾದ ಕರಿಕಂಬಳಿ ಮೇಲೆ ಕಾಯಿ, ಬೆಲ್ಲ, ಬಾಳೆಹಣ್ಣು ಇಟ್ಟು ಪೂಜೆ ಮಾಡಿ ಇದರ ಸುತ್ತಾ ಕುಣಿದು ಭಕ್ತಾದಿಗಳಿಗೆ ಹಂಚುತ್ತಾರೆ. ಜನಪದ ಸಂಪ್ರದಾಯಗಳನ್ನು ಇಲ್ಲಿ ಕಾಣಬಹುದಾಗಿದೆ.

### ಕರಿಯಮ್ಮ ದೇವಿಯ ಕಥಾನ

"ಸ್ಥಿರಪರ ಮಹಾಕಾಳಿ ಉಜನಿ ಸ್ಥಿರದೇವಿ"
ಧರೆಯೊಳಗೆ ಬಲ್ಲಿದವಳು ಕೊಲ್ಲಾಮರದಶಕ್ತಿ,
ಇದ್ದರೆಲ್ಲ ಒಂದಾಗಿ ಉಗ್ರರೂಪದಲ್ಲಿ ಬಂದು
ದುರ್ಗ ದೇವತೆಯಂ ಕರೆದು ಚತುರಂಗ
"ಸಹಿತವಾಗಿ ಮುಸ್ಸಲ್ ಮುದಾಗರಬಾಕು".
"ಕೈಯೆಂಬ ಕಠಾರಿ ನಿಟ್ಟದ ತ್ರಿಶೂಲ,
ಭರ್ಜಿ ಜಿಲ್ಲೆಯ ಬಾಕು, ತಾಸ್ಕಾರ ಮಾಸ,
ಜಾಗಟೆಯು ಗಡಿ ಸಹಿತ ಬಿಂಕಾರ ಫಿರಂಗಿ,
ತಂಬಾಕೆ ಸೆಳೆಬಾಣ ಶಸ್ತ್ರಾಅಸ್ತ್ರವನ್ನು ಹಿಡಿದು
ಸ್ಥಿರವಾಗಿ ನಿಂದೆಮ್ಮ. ಒಂದೊಂದು ಅವಾತರದಲ್ಲಿ
ಕೊಂಡಾಳಾಡುಳಲ್ಲಮ್ಮ ಕೃತಾಯುಗದಲ್ಲಿ
ನೀನು ಸ್ತ್ರೀ ಭದ್ರಕಾಳಮ್ಮ ತೇತ್ರಾಯುಗದಲ್ಲಿ ನೀನು
ಸೀತದೇವಿಯಮ್ಮ."
"ದ್ವಾಪರ ಯುಗದಲ್ಲಿ ನೀನು ದೌಪತಿ ದೇವಿಯಮ್ಮ
ಕಲಿಯುಗದಲ್ಲಿ ನೀನು ಕೊಲೆಯ ಮಾರಮ್ಮ
ಮಾರ್ಕಾಂಡೆಯ್ಯ ನೆಂಬುವನನ್ನು ಯುದ್ಧದಲ್ಲಿ ಗೆದ್ದಮ್ಮ
ಒಂದೊಂದು ಮುಖದಲ್ಲಿ ನೀನು ಊರುಮಾರಮ್ಮ ನೀನಾಗಿ
ಮೈಸಸುರನ್ನುಕೊಂದು
ಮದಗಳನ್ನು ಮುರಿದು ಕರಳು ಕಂಡವ
ಕಿತ್ತು ಮಸ್ತಕದ ಮೇಲಿಟ್ಟು"
"ಅವರ ಮೈರಕ್ತವನ್ನು ಪರಂಜ್ಯೋತಿಯಲ್ಲಿ ತುಂಬಿ ಸ್ಥಿರವಾಗಿ
ನಿಂದೆಮ್ಮ."
"ತಟ್ಟುಗೊಜ್ಜರ ಮೈಲಿ ಅಬ್ಬರದಿ ಉಜ್ವರವು
ಒಬ್ಬರಿಂದಾಗಿ ಹರಕೆಯನ್ನು ತಕೊಂಬೆ
ನಿನಗಾರು ಸರಿಯೆಲ್ಲವೆ ತಾಯಿ,"
ಕಾಲೊಂದಿಗೆ ಗೆಜ್ಜೆ ಲೊಲ್ಲ ಪಿಲ್ಲಿಯ ನಿಟ್ಟು,
ಅರಡಿ ಕೈಕಡಗ, ಅವಳ ದಾಸರ ಮಾಲೆ,
ಮುತ್ತಿನ ಮೂಗತಿಯನ್ನಿಟ್ಟು,
"ಬುಗಡಿ ಬಂಗಾರದ ಬೆಂತಾಕು,
ಸಿಸ್ತ ಮಡ್ಡಾವ ಪಟ್ಟಿ,
ಪೀತಾಂಬುರನವನ್ನಿಟ್ಟು ನೀ ಸ್ಥಿರವಾಗಿ ನಿಂದೇಮ್ಮ."
"ತುಂಗಾತೀರವನ್ನು ದಾಟಿ ಮಂಡೋಲಿಯಂಕೊಂದು
ಆಭರಣವನ್ನು ಸುರಿದು ವಜ್ರಕಣ್ಣನ್ನೆಕಿತ್ತು
ಉಗ್ರರೂಪವನ್ನು ತಾಳಿ ನಡುಗಡ್ಡೆಯೊಳಗೆ ನಿಂದೆಮ್ಮ."
"ಎಳ್ಳೆಯ ಬೇವಿನ ಸೀರೆ, ಹಣೆಬೊಟ್ಟು ಕಣ್ಣುಬೊಟ್ಟು,
ಬೇವಿನ ಸೀರೆಯನ್ನುಟ್ಟು ಬಾಯಿಬೀಗ, ಕುರಿಕೋಣ,
ಆರುಕೋಳಿ, ಸೊರುಬೆಲ್ಲ, ಎಡೆಬಿಡದೆ ತಕ್ಕೊಂಡೆ
ನೀನಗಾರು ಸರಿಯಿಲ್ಲವೇ ತಾಯಿ"
ಮಂಡೋಲಿಯನ್ನು ಕೊಂದು ಮತ್ತೊಂದು ಜಾವಕ್ಕೆ
ಹತ್ತು ಸಾವಿರನ್ನೇ ಕೊಂದುಮಿಕ್ಕಾದ ದೇಶಗಳ ಹೊಕ್ಕ
ತುಳಿಯುವೆನೆಂದು ಸುತ್ತಾಳು ಅಣ್ಣಗೇರಿ ಸಿರಿಯುಟ್ಟು
"ನಿವೀಲುಗೊಂದಿ, ತುರುಗಲ್ಲು, ಬಾದಾಮಿ, ಬಾಗಡಿಕೋಟೆ,
ಜಮಖಂಡಿ, ತೀರ್ಥಳವು, ಅದಡಿ ಅನಂತಪುರ,
ಹೊಸದುರ್ಗ, ಬೆಲ್ಲೂರು, ಕೋನಾಪುರ, ಹುಬ್ಬಳ್ಳಿ,
ದಾರವಾಡ, ಹಾವೇರಿಯನ್ನು ದಂಡನ್ನು ಕೊಂದೆಮ್ಮ."
"ಗರ್ಭ ಸ್ತ್ರೀ ಮಂತ್ರವನ್ನು ನಿರ್ಬೇಧವನ್ನು ಮಾಡಿ
ಅನುಗೊಂದಿವನ್ನೇ ಹೊಕ್ಕು ಹಂಕು ಮಾಡಿದತಾಯಿ
ಚಳ್ಳಕೆರೆ ಗುಟ್ಟಿಗೆ, ಕಲ್ಯಾಣ, ಕಲ್‌ದುರ್ಗ, ರಾಯಚೂರು,
ಮುದಿಗಲ್ಲು ಹೈದರಾಬಾದ್‌ವನ್ನು ಹೊಕ್ಕು, ಹೈಗು ಮಾಡಿದೆ
ತಾಯಿ."
"ಗುಡೇಕೋಟೆಯ ಸೀಮೆ ಗುಳ್ಳೇವು ಕಟ್ಟಿಸಿದೆ.
ತಳಕು ದೊಡ್ಡರಿಯನ್ನು ತಲೆಕೆಳಗೆ ಮಾಡಿದ ತಾಯಿ.
ಹುಟ್ಟು ಜಗಲೂರನ್ನು ದಿಟ್ಟನೆಮಾಡಿ ಮುಂದಕ್ಕೆನಡೆದಮ್ಮ,
ತಿರುಪತಿ ವೆಂಕಟನನ್ನು ಒಡೆದು ಗುಡುಗುಡು ಗುಡಾಗಿಸಿ
ಗುಡಿಗೆ ತೊರಣವನ್ನು ಕಟ್ಟಿಸಿ, ಮಡಿದ
ಮುಂಡಾಸ್ತವನ್ನೇ ಮಾಡಿ ಮುಂದಕ್ಕೆ ನಡೆದಮ್ಮ."
"ರಾಯಚೂರು, ವೇಲೂರು, ದಿಂಡೆಗಲ್ಲು, ದಾರಾಪುರ,
ಕುಂಭಕೋಣ, ಚನ್ನಪಟ್ಟಣ, ಕುಮ್ಮಟ ಇಲಾಖೆಯನ್ನೇ ಹೊಕ್ಕು,
ಸೊಕ್ಕನ್ನೆ ಮುರಿದಮ್ಮ ತಿರುಗಿ ನೀ ಬಂದೆ
ಬೆಂಗಳೂರು, ಬೆಲ್ಲೂರು, ಅರಸೀಕೆರೆ, ಸಂತೇಬೆನ್ನೂರು
ಸಣ್ಣಕ್ಕಿ ಜಾಜೂರು, ಹೊಳ್ಳರೆ ಚಂಗವಾರ
ಗಟ್ಟಿ ಶ್ರೀಗಂಧ ದೇವದುರ್ಗ
ಕೊಡಗು ಆದಡಿಹೊಳಗೆ ಇಲ್ಲಮ್ಮ."
"ಕೊಡೆಯೊಳು ಕೊಡಿಚಿನ್ನ ತಡೆಯಾದೆ ಹೊಯಿತಮ್ಮ
ಪೂಜೆ ಕಾಲೂರನ್ನೆ ತೃಣ ಮಾಡಿ ಬಂದೆಮ್ಮ,
ಕರಿಯಭೂದಿಹಾಳು ಹಣಕೊಂದಿ ತಾಲ್ಲೂಕು
ಒಕ್ಕಲು ಹೊಯಿತಮ್ಮ."

"ಕಾಳಿಕ ಮಲ್ಲೇಶ್ವರನ ಕಣ್ಣಿನಲ್ಲಿ ಕಂಡೆಯಮ್ಮ
ಸುರಪುರವನ್ನೇ ಹೊಕ್ಕು ಸೂರು ಮಾಡಿದ ತಾಯಿ."
"ಗಜೇಂದ್ರ ಗಡವನ್ನೇ ಹೊಕ್ಕು ಗಡಿಬಿಡಿ ಮಾಡಿದೆ ತಾಯಿ."
"ರೋಣಿಹಬ್ಬಿಗರಿಗೆ ಅಬ್ಬರದೆ ನೀ ಬಂದೆ ಕುದುಕು
ಬದಕು ಕೆರೆಗೆ ಗದಿಮ್ಮಿನೀ ಬಂದೆಮ್ಮ."
"ಹುಲಿಯ ಹೊಳಗೆ ನಿಂತು ಸುಲಿಗೆ ಮಾಡಿದೆ ತಾಯಿ",
ಕಂಪಲ್ಲಿ ಕಮಲಾಪುರ ಹೈನಟ್ಟಿ ಹಾಲ್ಬತ್ತಿ
ಸೊಗೆ ಗುಗ್ಗಳವು ಸೋದಿಸಿ ಹೋಯಿತೆಂದು
ಭೂತನಾಥ ದುರ್ಗ ಕೋಪದಲ್ಲಿ ಕೊಂದಮ್ಮ
ಶಾಂತಗಳ ಮಾಡಮ್ಮ ಅಂಡ ಹುಚ್ಚಂಗಿ ದುರ್ಗದ
ಯಲ್ಲಮ್ಮನೆಂದು ಎನ್ನಿಸಿಕೊಂಡಿದ್ದು."
"ಈ ಮಂಡಲಕ್ಕೆ ಅಧಿಪತಿಯಾದ ಬಂಡೊಯನ
ಬಳಿಗೆ ದಂಡು ತಿರುಗುತ್ತಾ ಬಂದೆಮ್ಮ."
"ವಿಜಯನಗರದೊಳಗಿದ್ದ ಮಲೆನಾಡು ಕರಿಯಮ್ಮ
ದೃಷ್ಟ ದೈತ್ಯರನ್ನೇಲ್ಲ ಅಟ್ಟಿಸಿಕೊಂಡು ಹೋಗಿ
ಹುಲಿಗೆ ಮಾಡಿಸಿದೆ ತಾಯಿ, ಹುಲಿಗೆ ಹೊಸೂರಮ್ಮ
ಕೋಟಿ ಸಿದ್ದರನ್ನಿಲ್ಲ ಮರ್ದನ ಮಾಡಿದೆ ತಾಯಿ
ಆಕೆಯರೆಂದರೆ ಜಾಜೂರು ಕರಿಯಮ್ಮ."
"ಚಿಂತೆಯನ್ನು ಪರಿಹಾರಿಸಿ ಚಂಚಲ ಮರಿಯಮ್ಮ
ನೀ ಇರ್ವರು ಎನ್ನ ಮನ ದೇವತೆಯಳು ಎಂದು
ಸ್ತೋತ್ರಗಳು ಮಾಡುವ ಪುತ್ರನ ತಪ್ಪು
ನೆಪುಗಳನ್ನೆಲ್ಲ ಎಚ್ಚರವ ನೀ ಕೊಟ್ಟು ಸಳುವಮ್ಮ."

**ಮಾರಿಕಣಿವೆ ಮಾರಮ್ಮ**

ಮಾರಿಕಣಿವೆ ಎಂದರೆ 'ಕರೆ ಕಟ್ಟಿದ್ದರು' (ಮಾರಿಕಣಿವೆ ಊರಿನ ಹೆಸರು), ಕಣಿಮೆ ಮಾರಮ್ಮ ಎಂದು ನಂತರ ವಾಣಿ ವಿಲಾಸ ಸಾಗರ ಎಂದು ಕರೆಯುತ್ತಾರೆ. ಆ ಕಣಿವೆಗೆ ವಿಶ್ವಶ್ವರಯ್ಯ ವೇದಾವತಿ ನದಿ ಬರೀ ದೊಡ್ಡದಾಗಿ ಹಳ್ಳ ಹರಿಯುವುದನ್ನು ನೋಡಿ ನಕ್ಷ ಮೈಸೂರು ಮಹಾರಾಜರು ಈ ವಿಚಾರದಲ್ಲಿ ಎರಡು ಗುಡ್ಡದ ನಡುವೆ ಹಣೆಕಟ್ಟು ಕಟ್ಟಿದ್ದರು. ಮಾರಿಕಣಿವೆ ನೀರು ಹರಿದು ಬರುವುದು ವೇದಾವತಿ ನದಿ ಸೇರುವುದಕ್ಕೆ ಆ ನೀರಿನ ಮೂಲವನ್ನು ಕಂಡು ಮೈಸೂರು ಮಹಾರಾಜ ಕನಸಿನಲ್ಲಿ ಹೆಣ್ಣು ಮಗಳ ರೂಪದಲ್ಲಿ ನೀವು ಕೆರೆಯನ್ನು ಕಟ್ಟಿ ಎಂದು ತನ್ನ ಕನಸಿನಲ್ಲಿ ಅಂತರಗಟ್ಟಮ್ಮ ದೇವಿಯಾಗಿ ಬಂದಿದ್ದು, ಕೆರೆ ಜಾಗದಲ್ಲಿ ಹೊಡೆದು ಹೋಗಲು ಕಾರಣ ಅಣೆಕಟ್ಟಿಗೆ ಎದೆಯನ್ನು ಕಟ್ಟು ಕುಳಿತು ಕೊಳ್ಳುತ್ತೇನೆ ಮತ್ತು ಈ ರಕ್ಷಿಸುತ್ತೇನೆ ಎಂದು ದೇವಿಯು ಕನಸಿನಲ್ಲಿ ರೂಪದಲ್ಲಿ ಹೇಳುತ್ತಾಳೆ.

ಮೈಸೂರು ಮಹಾರಾಜರು ಆರ್ಥಿಕ ಹಣಕಾಸಿನ ಪರಸ್ಥಿತಿಯನ್ನು ತನ್ನ ತಾಯಿ ವಾಣಿಮ್ಮ ಹತ್ತಿರ ನನ್ನಗೆ ಒಬ್ಬ ಹೆಣ್ಣು ದೇವತೆಯೂ ಕನಸಿನಲ್ಲಿ ಬಂದು ಹೇಳಿದ್ದು ಕೆರೆ ಹೊಡೆದು ಹೋದ ನಂತರ ನನ್ನ ಎದೆ ಕೊಟ್ಟು ರಕ್ಷಿಸುತ್ತೇನೆ ಎಂದು ಹೇಳಿದ್ದಾಳೆ. ಮೈಸೂರು ಮಹಾರಾಜರು ಆರ್ಥಿಕ ಹಣಕಾಸಿನ ಪರಸ್ಥಿತಿ ಇರಲಿಲ್ಲ. ವಾಣಿಮ್ಮ ಹತ್ತಿರ ಅಮ್ಮ ನನ್ನ ಹತ್ತಿರ ಬಡವಾಳ ಇಲ್ಲದೇ ನೀರು ಪಾಲಗಿ ಹೋಗಿದೆ. ನಿನ್ನ ಒಡವೆ ಆಭರಣಗಳು ಕೊಟ್ಟರೆ ಮಾರಿ ನಿನ್ನ ಹೆಸರಿನ ಮೇಲೆ ಅಣೆಕಟ್ಟು ಕಟ್ಟುತ್ತೇನೆ ಎಂದು ರಾಜರು ಹೇಳಿದರು. ನಂತರ ಅಂತರಗಟ್ಟಮ್ಮ ಕೆರೆ ನೀರಿನ ಉಪಯೋಗಿಸುವ ಭಕ್ತರು ನನ್ನ ದೇವಸ್ಥಾನವನ್ನು ಕಟ್ಟಿ. ಭಕ್ತಾಧಿಗಳು ಎಲ್ಲಾರು ನನ್ನ ಬೆನ್ನಿಗೆ ಪೂಜೆ ಮಾಡಬೇಕು. ಕೆರೆಯ ಕಣಿವೆ ಕಾದು ಕುಂತಿರುತ್ತೇನೆ. ನನ್ನ ಹೆಸರು ಅಂತರಗಟ್ಟಮ್ಮ ಹೆಸರು ಹೋಗಿ ಕಣಿವೆ ಮಾರಮ್ಮ ಎಂದು ಹೇಳಿರುವುದನ್ನು ಮೂಲದ ಹಿನೇಲೆಯಲ್ಲಿ ಕರೆಯುತ್ತಾರೆ.

ಕೆರೆಯ ಪಕ್ಕದ ಬೆನ್ನಿನ ಹಿಂಭಾಗದಲ್ಲಿ ದೇವಸ್ಥಾನವನ್ನು ಕಟ್ಟಿ ಕಣಿವೆ ಮಾರಮ್ಮ ಎಂದು ಪೂಜೆ ಮಾಡುತ್ತಾರೆ. ಆ ಕಣಿವೆ ಒಳಗೆ ಮೂರು ಅಕ್ಕತಂಗಿಯರು ಪ್ರತ್ಯಕ್ಷರಾಗಿರುತ್ತಾರೆ. ಅವರ ಹೆಸರು ಪಾರ್ವತಿ, ಲಕ್ಷ್ಮಿ ಮತ್ತು ಸರಸ್ವತಿ, ನಂತರ ಪಾರ್ವತಿ ಎಂದರೆ ದಾರಿ ಕೊಡುವಳು, ಲಕ್ಷ್ಮಿ ಎಂದರೆ ಹಣ, ಸರಸ್ವತಿ ಎಂದರೆ ವಿದ್ಯೆ ಇದಕ್ಕೆ ಪೂಜೆ ಮಾಡುವ ಪೂಜಾರಿಯವರು ಹೇಳುವುದು ದೊಡ್ಡಾಗಿರುವುದು ದೊಡ್ಡಮ್ಮ, ಉದ್ದವಾಗಿರುವ ಲಕ್ಷ್ಮೀ ಗಣಿಯಮ್ಮ, ಎರಡು ಕೈಗಳನ್ನು ಜೋಡಿಸಿ ರೇಖೆಗಳನ್ನು ಹೇಳುವ ದೇವತೆ ಸಣ್ಣಮ್ಮ ಎಂದು ಹೆಸರು ಇಟ್ಟರು. ಗ್ರಾಮದಲ್ಲಿ ರೋಗರೂಜಿನ ಬಂದರೆ ಈ ದೇವತೆಗಳನ್ನು ಪೂಜಿಸುತ್ತಾರೆ. ಅಂತರಗಟ್ಟಮ್ಮ ಮೂಲ ಹೋಗಿ ಕಣಿವೆ ಮಾರಮ್ಮ ಎಂದು ಹೆಸರು ಇಟ್ಟು ಆ ಗ್ರಾಮದ ನದಿಯ ತೀರದ ಸುತ್ತಮುತ್ತ ಜನರು ಆ ದೇವತೆಗೆ ಪೂಜಿಸುತ್ತಾರೆ.

ಗಣಿನ ಮಲಮ್ಮನ ಮೂಲ ಜ್ಞಾನ ಭರಮಗಿರಿ ಶ ೧೫–೧೬ ನೇ ಶತಮಾನದ ವಿಜಯನಗರ ಸಹ ಈ ದೇವಿಯ ಚರಿತೆ ಬಗ್ಗೆ ತಿಳಿಯಬಹುದು. ಈ ದೇವಿಯ ಮಹಿಮೆ ಎಂದರೆ ಭಕ್ತಾಧಿಗಳು ತಮ್ಮ ಕಷ್ಟ ದುಃಖಗಳ ಬಗ್ಗೆ ಕೇಳಿಕೊಂಡಾಗ ಹೂವನ್ನು ಕೊಡುತ್ತೇವೆ. ಕಣಿವೆ ಮಾರಮ್ಮ ದೇವಿ ಕೆರೆಯ ಮತ್ತು ಅಣೆಕಟ್ಟೆಯ ಕಡೆ ಮುಖಮಾಡಿ ಕಾಲು ಚಾಚಿ ಕುಳಿತಿದ್ದಾಳೆ. ಇಲ್ಲಿ ವಿಷೇಶತೆ ನೋಡಿದ್ದಾರೆ. ಅಣೆಕಟ್ಟಿಗೆ ರಕ್ಷಣೆ ಮಾಡುವುದು ನದಿ ತೀರದ ಮಳೆ ಹರಿಯುವ ತೊರೆ ನೀರಿನಿಂದ ಈ ಭಗದ ಹಾಯಿಯ ಮುಖ್ಯ ಶಿಕ್ಷಕಿಯಾಗಿದ್ದಾಳೆ. ಅಲ್ಲಿ ಸುತ್ತಮುತ್ತಲಿನ ಆರಾಧ ದೇವತೆ ಕಣಿವೆ ಮಾರಮ್ಮ ದೊಡ್ಡ ದೇವಲಶಕ್ತಿ ಬೆಳೆದು ಅನೇಕ ಜನರ ಮನೆ ದೇವತೆಯಾಗಿ ಕಣಿವೆಮಾರಮ್ಮ ಎಂದು ಹೆಸರು ಡೆದ್ದಾಳೆ.

ವೇದಾವತಿ ಚಿನ್ನಹಗರಿ (ಜನಿಗೆಹಳ್ಳಿ) ಸುವರ್ಣಮುಖಿ ಮುಂತಾದ ನದಿಗಳು ಹರಿದು ನೀರಾವರಿ ಸೌಲಭ್ಯವನ್ನು ಅಲ್ಪವಾಗಿ ಕಲ್ಪಿಸಿವೆ. ಈ ಜಿಲ್ಲೆಯಲ್ಲಿ ವೇದಾವತಿ ನದಿ ೨೦೮ ಕಿಮೀ ಜನಗಿಹಳ್ಳ (೧೨೮ ಸುವರ್ಣಮುಖಿಹಳ್ಳ ೧೧ ಕಿ.ಮೀ. ಹರಿದು ನವಲ್ಲ. ಎಕರೆಗೆ ನೀರೊದಗಿಸುತ್ತದೆ. ಭದಾಜಲಾಶಯದಿಂದ ೨೭,೪೬೦ ಎಕರೆ, ವಾಣಿವಿಲಾಸದಿಂದ ೧೦,೦೦೦ ಹೆಕ್ಟೇರ್ ಗಾಯಿತ್ರಿ ಜಲಾಸಯದಿಂದ ೯೨೮ ಹರು, ರಂಗಯ್ಯನ ದುರ್ಗ ಜಲಾಶಯದಿಂದ ಸುಮಾರು ೧೦೦೦ ಎಕರೆಗೆ ನೀರಾವರಿ ಸೌಲಭ್ಯವಾಗಿದೆ. ಚಂದ್ರವಳ್ಳಿ, ರಾಣೀಕೆರೆ, ನಾಯಕಪಟ್ಟಿ, ಭರಮಸಾಗರ, ಗೌರಸಮುದ್ರ, ಗೋನೂರು ಪರಶುರಾಂಬರ, ಬುಕ್ಕಂಬುದಿ ಮುಂತಾದ ಕರೆಗಳು ನೀರಾವರಿ ಯೋಗ್ಯವಾದ ಪದೇಶಗಳಾಗಿವೆ.

ಈ ಜಿಲ್ಲೆಯ ಪ್ರಮುಖ ನದಿ ವೇದಾವತಿ ನದಿ ವೇದ ಮತ್ತು ಅವತಿ ಎಂಬ ಎರಡು ಹೊಳೆಗಳು ಸೇರಿ ವೇದಾವತಿ ನದಿಯಾಗಿ ಹರಿಯುತ್ತದೆ. ಹೊಸದುರ್ಗದ ಮೂಲಕ ಮತ್ತೊಡು ಸಮೀಪದಿಂದ ಬ್ರಹ್ಮಗಿರಿದುರ್ಗದಿಂದ ವಾಣಿವಿಲಾಸ ಸಾಗರ ಸೇರುತ್ತದೆ. ನಂತರ ಹಿರಿಯೂರು ತಾಲ್ಲೂಕಿನಿಂದ ಚಳ್ಳಕೆರೆ ತಾಲ್ಲೂಕನ್ನು ಪ್ರವೇಶಿಸಿ ಘಟಪರ್ತಿ ಆಂಧ್ರಕ್ಕೆ ಹರಿದು ತರುವಾಯ ಚಿನ್ನಹಗರಿ ನದಿಯನ್ನು ಕೊಡುವುದು.

ಜನ್ನಿಗೆಹಳ್ಳ ಅಥವಾ ಚಿನ್ನಹಗರಿ ನದಿ ಈ ಭಾಗದ ಜನರಿಗೆ ಪವಿತ್ರವಾದದು. ಈ ನದಿ ಆಧ್ಯಾತ್ಮಕವಾಗಿಯೂ, ಸಾಂಸ್ಕೃತಿಕವಾಗಿಯೂ ನದಿ ತೀರದಲ್ಲಿ ಗಂಗಪೂಜೆ, ಹಬ್ಬ ಜಾತ್ರೆಗಳಲ್ಲದೆ ವಾಸಿಸುವ ಮನೆಗೆ ಅಪಕೊಯ್ಯಲು, ಮೀನು ಹಿಡಿಯಲು, ಕುರಿ ಮೇಕೆಗಳನ್ನು ಮೇಯಿಸಲು ಮತ್ತು ನಡುವಿನಲ್ಲಿ ಸ್ನಾನಮಾಡಿಸಲು ನೇರವಾಗಿದೆ. ಈ ನದಿ ಚಿತ್ರದುರ್ಗ ಸಮೀಪದ ಬೆಟ್ಟಗಳಲ್ಲಿ ಹುಟ್ಟಿ ಹೊಳಲ್ಕೆರೆ, ಚಿತ್ರದುರ್ಗ, ಜಗಲೂರು ತಾಲ್ಲೂಕುಗಳ ಮೂಲಕ ಕೂಡ್ಲಿಗಿ ತಾಲ್ಲೂಕಿನಲ್ಲಿ ಹರಿದು ಮುಂದೆ

ರಾಯದುರ್ಗ ತಾಲೂಕುನ್ನು ಪ್ರವೇಶಿಸಿ ತುಂಗಾಭದ್ರ ನದಿಯನ್ನು ಸೇರುತ್ತದೆ. ಇದಕ್ಕೆ ಮೊಳಕಾಲೂರು ಸಮೀಪ ರಂಗಯ್ಯನದುರ್ಗ ಜಲಾಶಯವನ್ನು ನಿರ್ಮಿಸಿದ್ದಾರೆ.

ಭಟ್ಟರಹಳ್ಳಿ ದೇವಸಮುದ್ರ ಕೆರೆಗಳ ನೀರು ಬಂದು ಈ ನದಿಯನ್ನು ಸೇರುತ್ತೇವೆ. ಸ್ವರ್ಣಮುಖಿ ಇಲ್ಲಿನ ಪ್ರಮುಖ ಇಲ್ಲಿನ ಪ್ರಮುಖ ಹೊಳೆ ಇದರ ಮೂಲ ತುಮಕೂರು ಜಿಲ್ಲೆ ಸಿದ್ದರ ಬೆಟ್ಟದಿಂದ ಶಿರಾ ಮಾರ್ಗವಾಗಿ ಚಿತ್ರದುರ್ಗಜಿಲ್ಲೆ ಹಿರಿಯೂರು ತಾಲೂಕಿನ ಕೂಡ್ಲಹಳ್ಳಿ ಹತ್ತಿರ ವೇದಾವತಿ ನದಿಗೆ ಸೇರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ೭ ಕಿಮೀ ಹರಿಯುತ್ತೇದೆ. ಹಿರಿಯೂರು ತಾಲೂಕು ಇಕ್ಕನೂರು ಬಳಿ ಈ ಹೊಳೆ ನದಿಯನ್ನು ಸೇರುತ್ತೇದೆ. ಚಳ್ಳಕೆರೆ ತಾಲೂಕಿನ ರಾಣಿ ಕೆರೆಗೆ ಪೀಡರ್ೊವೆ. ಹಿರಿಯೂರು ಧರ್ಮಪರ ಪೀಡರ್ನಾಲೆಗಳಿಂದ ನೀರಾವರಿ ಕೃಷಿ ಯೋಜನೆಗಳನ್ನು ಮಾಡಿರುವುದು ಉಪಯೋಗವಾಗಿದೆ.

ಈ ವೇದಾವತಿ ನದಿ ತೀರದ ಜನರ ಕಸುಬು ಕೃಷಿಯಿಂದ ತೆಂಗು ಅಡಿಕೆ ಬೆಳೆ ಭತ್ತ ಕಡಲೆ ಕಾಯಿ, ರಾಗಿ, ಸೂರಕಾಂತಿ, ಹತ್ತಿ, ನೀರುಳ್ಳಿ ಇನ್ನೂ ಮುಂತಾದ ಬೆಳೆಗಳು ಬೆಳೆಯುತ್ತಾರೆ. ಈ ನದಿಗೆ ಉಪನದಿಗಳು ಮಳೆ ಬಂದರೆ ನೀರು ಇಲ್ಲದೆ ಬರಿದ್ದಾಗಿವೆ. ಈ ಆದರೂ ಕೊಳೆಭೂವಿ ರಿಂಗು ಬಾವಿಗಳಿಂದ ನದಿ ತೀರದ ಹಳ್ಳದಿಂದ ನೀರು ಆಯಿಸಿ ಪಕ್ಕದ ತೀರದಲ್ಲಿ ಬೆಳೆ ಬೆಳೆಯುತ್ತಾರೆ.

**ಕಣಿವೆ ಮಾರಮ್ಮನ ಪೂಜಾ ಆಚರಣೆ:**

ಈ ದೇವತೆ ಇಲ್ಲಿನ ಜನರ ಆರಾಧದೇವಿ ಇಲ್ಲಿ ಪೂಜಾ ವಿಧನ ಪ್ರತಿನಿತ್ಯ ಬೆಳಗ್ಗೆ ಹಾಗೂ ಸಂಜೆ ದೇವಿ ಪೂಜಾ ಕಾರ್ಯ ನಡೆಯುತ್ತವುದು ನಿತ್ಯ ಅರ್ಚಕರು ಸ್ನಾನಾಧಿಗಳನ್ನು ಮುಗಿಸಿ ದೇವಾಲಯಕ್ಕೆ ಬಂದು ಕಣಿವೆ ಮಾರಮ್ಮ ದೇವಿಯ ವಿಸರ್ಜನ ಕಾರ್ಯ ಮಾಡುವರು. ನಂತರ ದೇವಿಗೆ ಮುಖವಾಡಗಳನ್ನು ಇಟ್ಟು ವಸ್ತು ಹೂಗಳಿಂದ ಅಲಂಕರಿ ಪೂಜಾ ಕಾರ್ಯಕ್ಕೆ ಸಿದ್ಧತೆ ಮಾಡುವುದು ಇಲ್ಲಿನ ಸಂಪ್ರದಾಯ ಮಾಡುವುದು ತಿಳಿಯುತ್ತದೆ. ನಂತರ ಸಾಕಷ್ಟು ಭಕ್ತಾದಿಗಳು ದೇವಿಯ ದರ್ಶನ ಪಡೆಯಲು ಬರುತ್ತಾರೆ. ದೇವಿಯ ಪೂಜೆ ಮುಗಿದ ನಂತರ ಭಕ್ತಾದಿಗಳು ದೇವಿಯ ದರ್ಶನ ಪಡೆದು ಅರ್ಚಕರಿಂದ ತಿರ್ಥ ಹೂ ಪ್ರಸಾದಗಳನ್ನು ಸವೀಕರಿಸುವರು. ಮಂಗಳವಾರ ಮತ್ತು ಶುಕ್ರವಾರ ದೇವಿಯ ವಿಶೇಷ ಪೂಜೆ ನಡೆಸುವುದು.

**ಜಾತ್ರೆ ಮತ್ತು ಉತ್ಸವಗಳು**

ವೇದಾವತಿ ನದಿ ತೀರದ ಅಣೆಕಟ್ಟು ಹಿಂಭಾಗದಲ್ಲಿರುವ ಕಣಿವೆಮಾರಮ್ಮನ ದೇವಿಯು ಪ್ರತಿ ವರ್ಷ ವಾರದ ಕಣಿವೆ ಮಾರಮ್ಮನ ದೇವಿಯ ಜಾತ್ರೆ ನಡೆಯುತ್ತೇದೆ. ವೈಶಾಖ ಬಸವ ಜಯಂತಿ ಸಮಯ ಭರಮಗಿರಿ ಗ್ರಾಮ ಪ್ರಸಿದ್ಧ ಸ್ಥಳ ಏಕೆಂದರೆ ದೈವಭಕ್ತಿ ಕಣಿವೆ ಮಾರಮ್ಮನಿಗೆ ೧೯೫೧ ರಲ್ಲಿ ಯಿಂದ ವಂಶಪಾರಂಪರಿಕವಾಗಿ ಈ ತಾಯಿ ಗೌಡರಿಗೆ ಅಧಿಕಾರ ಕೈಯಲ್ಲಿದೆ. ಅವರ ಸಮೂಹಕದಲ್ಲಿ ಪ್ರತಿಯೊಂದು ಕಾರ್ಯ ಆಚರಣೆ ಈ ಇವರ ಸಮೂಹಕದಲ್ಲಿ ನಡೆಯುತ್ತೇದೆ. ಮೊದಲು ಹುಳಿಯೂರಿನ ಒಕ್ಕಲು ಗೌಡರಿಗೆ ಈ ದೇವಿ ಪೂಜೆ ಕಾರ್ಯ ಕ್ರಮನಡೆಸುವುದು ಅಧಿಕಾರ ಇತ್ತು ಅಮೇಲೆ ಭರಮಗಿರಿಯ ಗ್ರಾಮಕ್ಕೆ ಹಸ್ತಾಂತರವಾಗಿ ತಾಯಿಯ ಹಾಲಪ್ಪ ನಾಯಕರರು ಅಧಿಕಾರ ಈ ವಂಶಸ್ಥರು ತಾಯಿ ಬಿರುದಾವಳಿ ಮತ್ತು ಆಭರಣಗಳು ದೇವಿಯ ಒಡವೆಗಳ ಸಾಮಾನು ಇವರ ಸಮೂಹಕದಲ್ಲಿವೆ. ಇವರ ಮೂಲ ಅಧಿಕಾರವನ್ನು ಮಾಡುತ್ತಾರೆ. ಈ ಭರಮಗಿರಿ ಗ್ರಾಮ ಗೌಡರ ಮನೆಗೆ ತಾಯಿಯ ಸರ್ಕಾರಕ್ಕೆ ವರ್ಗವಾಗಿದೆ.

**ಕಣಿವೆ ಮಾರಮ್ಮನ ಆಚರಣೆಗಳು**

ಮಂಗಳವಾರ ದೇವಿಯ ಪ್ರಥಮ ಪೂಜೆ ಮಾದಲಂಗಿತ್ತಿ ಶಾಸ್ತ್ರ
ಬುಧವಾರ ದೇವಿಯ ಗಂಗಾಪೂಜೆ ಮತ್ತು ಜಲ್ಲ ಉತ್ಸವ
ಗುರುವಾರ ದೇವಿ ಉತ್ಸವ ಮತ್ತು ಆರತಿ.
ಶುಕ್ರವಾರ ಅಮ್ಮನವರ ಬ್ರಹ್ಮ ರಥೋತ್ಸವ
ಶನಿವಾರ– ದೇವಿಯ ಸಿಡಿ ಉತ್ಸವ

**ಭಾನುವಾರ– ದೇವಿಯ ಗುಡ್ಡ ಇಳಿಸುವುದು**

ಸೋಮವಾರ–ದೇವಿಗೆ ಭಮಗಿರಿ ಕೆರೆ ಹಿಂಭಾಗದಲ್ಲಿ ದೊಡ್ಡ ಸೇವೆ ಮುಗಿಸಿಕೊಂಡು ಅಮ್ಮವರ ಗುಡ್ಡ ಹತ್ತುವುದು.

**ಮಂಗಳವಾರ ದೇವಿಯ ಚಪ್ಪರ ಇಳಿಸುವುದು**

ಪ್ರಥಮ ದಿನ ದೇವಿಗೆ ಹೊಸ ವಸ್ತು ಆಭರಣಗಳನ್ನು ತೊಡಿಸಿ ಭರಮಗಿರಿಯಿಂದ ಹೊರಟು ಅಮ್ಮನವರನ್ನು ವಾಣಿವಿಲಾಸಪುರದಲ್ಲಿ ಮನೆಮನೆಗೆ ಕರೆದುಕೊಂಡು ಹೋಗುವ ಪದ್ಧತಿ ಹಿಂದೆ ಇತ್ತು. ಆದರೆ ಅಮ್ಮನವರ ಜಲ್ಲಿ ಉತ್ಸವಕ್ಕೆ ಸಮಯ ಇಲ್ಲವಾದ್ದರಿಂದ ಇತ್ತೀಚಿಗೆ ಮನೆಗಳಿಗೆ ಬಿಡಲು ಅವಕಾಶ ನೀಡದಿರುವ ಪ್ರಯುಕ್ತ ಗ್ರಾಮದಲ್ಲಿ ಹಲವು ಕಟ್ಟೆಗಳ ಹತ್ತಿರ ದೇವಿಯನ್ನು ಕುಳಿರಿಸುವರು. ಪ್ರತಿ ಮನೆಯವರು ಅಲ್ಲಿಗೆ ಬಂದು ಮಂಗಳಾರತಿ ಮಾಡಿಸಿಕೊಂಡು ಹೋಗುವ ಸಂಪ್ರದಾಯವಿದೆ. ನಂತರ ಅಮ್ಮನವರ ಬ್ರಹ್ಮ ರಥೋತ್ಸವ ನಡೆಯುತ್ತದೆ. ಅಂದು ರಥೋತ್ಸವ ಸಿಡಿ ಉತ್ಸವ ಅಮ್ಮನವರ ವಿವಿಧ ಕಾರ್ಯ ಕ್ರಮಗಳು ನಡೆಯುತ್ತವೆ.

ಬ್ರಹ್ಮ ರಥೋತ್ಸವದಂದು ವಾದ್ಯ ವೈಭವಗಳೊಂದಿಗೆ ಬ್ರಹ್ಮ ರಥೋತ್ಸವದ ಬಳಿಗೆ ದೇವಿಯನ್ನು ಕರೆತರುತ್ತಾರೆ, ತಳಿರು ತೋರಣಗಳಿಂದ ಕುಳ್ಳಿರಿಸುವರು. ಈ ಸಂದರ್ಭದಲ್ಲಿ ಸಮಯ ೩೦೦ ಗಂಟೆಗೆ ರಥೋತ್ಸವ ನಡೆಯುತ್ತದೆ.

**ವೇದಾವತಿ ತೀರದ ಅಂತರ ಘಟ್ಟಮ್ಮ**

ಲಕ್ಕಮ್ಮನ ಮೈಜಿಡ್ಡು ಮಾಣಿಕಕ್ಕೆ ಜಿಡ್ಡಿ ಕಸ್ತೂರಿ ನೆರಿಗೆಯ ಜಿಡ್ಡು ಪರಿಮಾಳ । ಲಕ್ಕಮ್ಮನಿಗೆ ಗಿರಿಯ ತಿಮ್ಮಯ್ಯ ಮನಸಿಟ್ಟು.

ಈ ಸಂಗ್ರಹದಲ್ಲಿ ಬರುವ ಲೋಕತಿರುಗೊ ಮಾತಂಗಿ ಹಸಿದಿರುವ ಪೋತರಾಜ ಅಕ್ಕತಂಗೇರು ಏಳುಮಂದಿ ಮುಂತಾದವುಗಳ ಬಗ್ಗೆ ಮತ್ತಷ್ಟು ಮಾಹಿತಿ ಸಂಗ್ರಹವಾಗಿದೆ. ಅಂತರಘಟ್ಟ ವಾಮಾಚಾರ ಪಂಥದ ಆಚರಣೆಯ ಕೇಂದ್ರವಾದ್ದುದು. ಅವೆಲ್ಲವೂ ಇಂದು ನಾಗರಿಕಪ್ರಪಂಚಲ್ಲಿ ಸಾಂಕೇತಿಕ ಆಚರಣೆಗೆ ಒಳಪಟ್ಟಿದೆ. ಅದೂ ಅಲ್ಲದೆ ಅಂತಘಟ್ಟಯ ಗುಡಿ ಫರಂಗಿಯವರಿಂದ ಸಂಪತ್ತು ಲೂಟಿಯಿಂದ ಐತಿಹಾಸಿಕ ಪ್ರಸ್ತಾವನೆಯೂ ಈ ಸಂಗ್ರಹದಲ್ಲಿ ಬಂದಿದೆ. ಕರಿಯಮ್ಮ ಮಲಯಮ್ಮರು ಫಲವಂತಿಕೆ ದೇವತೆಗಳು ಬುಡಕಟ್ಟಿನ ಆಚರಣೆಗಳು ಮೂಲ ರೂಪದಲ್ಲಿ ಗ್ರಾಮೀಣ ದೇವತೆಗಳ ಧಾರ್ಮಿಕ ಆಚರಣೆಗಳಲ್ಲಿ ಪ್ರತ್ಯಕ್ಷವಾಗಿಯೋ ಸಾಂಕೇತಿಕ ಪರೋಕ್ಷವಾಗಿಯೇ ಮುಂದುವರೆದಿದ್ದು, ಮತ್ತೆ ಶಕ್ತಿ ಸ್ವರೂಪದಲ್ಲಿ ಶಕ್ತಿಪಡೆದು ಮರುಹುಟ್ಟು ಪಡೆಯುತ್ತಿದೆ. ಈ ನೆಲದ ಮೂಲ ಸಂಸ್ಕತಿಗೆ ಅಂದರೆ ಶ್ರಮ ಸಂಸ್ಕತಿಗೆ ಶ್ರೀಸಾಮಾನ್ಯನ ಸಂಸ್ಕತಿ ಅಧಿಕೃತ ಮಾನ್ಯತೆ ದೊರೆಯುವಂತಾಗಿದೆ. ಹೊಸದುರ್ಗ ಪರಿಸರ ಗ್ರಾಮದೇವತೆಗಳು ಸಂಗ್ರಹವೇ ಇದಕ್ಕೆ ಸಾಕ್ಷಿ. ಈ ಸಂಗ್ರಹದಲ್ಲಿ ಬರುವರಾಗಿ ಹೂವಿನ ಪೂಜೆಯೂ ವಿಶಿಷ್ಟವಾಗಿದೆ.

ಹೊಸದುರ್ಗದ ಒಡಲಿನಲ್ಲಿ ಇನ್ನೂ ಅನೇಕ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕತಿಕ ರಹಸ್ಯಗಳು ಅಡಗಿದೆ. ಹೊಸದುರ್ಗದ ಗ್ರಾಮದೇವತೆಗಳ ಜನಪದ ಆಚರಣೆಗಳು ಗ್ರಾಮತೆಗಳ ಆಚರಿಸುವ

ಪದ್ಧತಿ ನಂಬಿಕೆಗಳು ತಲೆ ತಲೆಮಾರಿನಿಂದ ಉಳಿದಿಕೊಂಡು ಬಂದಿರುವುದನ್ನು ತಿಳಿಯಬಹುದು.

ಜನಪದ ದೇವರುಗಳು ಹಾಗೇ ಜಾತ್ರೆಗಳನ್ನು ಕುರಿತು ಅಪಾರ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಆಯಾ ದೇವರು ಹಾಗೂ ಕ್ಷೇತ್ರಗಳ ಐತಿಹ್ಯ, ನಂಬಿಕೆ, ಆಚರಣೆ ಸಂಪ್ರದಾಯಗಳನ್ನು ಕುರಿತು ಈ ಸಾಮಗ್ರಿ ಜನಪದ ಅಧ್ಯಯನದ ವಿವಿಧ ಆಲೋಚನೆಗಳಿಗೆ ಅನುವು ಮಾಡಿಕೊಟ್ಟಿದೆ. ಈ ಸೀಮೆಯ ಗಾದೆಗಳು ನುಡಿಗಟ್ಟಿಗಳು ಈ ಗ್ರಾಮದ ಗ್ರಾಮ ನಾಮಗಳು ಬಂದಿದ್ದು ಅಡ್ಡಿ ಹೆಸರುಗಳು ಪ್ರಾದೇಶಿಕ ಭಾಷಾ ವೈಶಿಷ್ಟ್ಯವನ್ನು ಕಂಡುಕೊಳ್ಳುವಲ್ಲಿ ನೆರವು ಆಗುತ್ತೇವೆ.

ನಮ್ಮ ನೆಲೆ, ಸಂಸ್ಕೃತಿಯ ಮೇಲೆ ಜರುಗುತ್ತಿರುವ ಜಾಗತೀಕರಣದ ಪರಿಣಾಮಗಳನ್ನು ಅರ್ಥೈಸಿಕೊಳ್ಳಬೇಕಾದರೆ ಗಮನ ಸೆಳೆಯುತ್ತೇವೆ. ಸಜ್ಜೆ, ನವಣೆ ಸಾವೆ, ಅರ್ಕ, ಬರಗಿಕ್ಕಿ, ಆ ಕ್ರಮಗಳನ್ನು ಕುಸುಮೆ, ಉಚ್ಚೆಳ್ಳು ಇತ್ಯಾದಿ ಹಲವಾರು ಕಣ್ಮರೆಯಾ ಧನ್ಯಗಳೊಂದಿಗೆಯಾಗಿರುವುದು ನಮ್ಮ ನೆಲದ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ.

ಅಂತರಘಟ್ಟಮ್ಮನ ಪದಗಳು (ಪುಟ–೧೪೬ ರಲ್ಲಿ ಹೇಳಿದವರು ಶ್ರೀಮತಿ ಕರಿಯಮ್ಮ (೭೦) ದೊಡ್ಡಮ್ಮ (೬೦) ಚಿಕ್ಕಮ್ಮ (೭೦) ಕರಿಯಮ್ಮ (೭೫) (ಅಂತರಘಟ್ಟ)

ಗ್ಯಾನಗ್ಯಾನಾದಾಗೆ । ಮೇಲು ಮಾಳಿಗ್ಯಾಗೆ ।
ತೊಗೊತೊಟ್ಟುಲಾಗೆ । ಕರಿಯಮ್ಮ ।

ಉವ್ವಾಲೆ ಆಡುತಾಳೆ ॥ಪ॥
ಹುತ್ತಾದ ಶ್ಯಾವ್ಯಾಗೆ । ಹುಟ್ಟಾಳೆ ಕರಿಯವ್ವ ।
ಮತ್ತೋಡಿ ಗ್ವಾಲೆ ಬರುದಾಳೆ ॥ ಹಾಲಪ್ಪಗೌಡ ।

ಮತ್ತಿನಂದಲವ ಕಳುವಯ್ಯ ॥೧॥
ಲಿಂಗದಳ್ಳಿ ತಾವ । ಮಂದಿ ಲೆಕ್ಕವ ಮಾಡಿ ।
ದುಂಡು ಮಲ್ಲಿಗೆ ಧರಿಸ್ಯಾಳು । ಕರಿಯವ್ವ ।
ಗಿಂಡಿ ತೀರುತ್ತಕ್ಕೆ ನೆಡುದಾಳೆ ॥೨॥
ಗಿಂಡಿ ತೀರುಥದಲ್ಲಿ । ಆಯವುಳ್ಳ ಕಲ್ಲೆಲ್ಲಿ । ಅ.
ಮೇಲೆ ಕಲ್ಲೆತ್ತಿಪುರವೆಲ್ಲ ॥ ಕರಿಯಮ್ಮ ।

ಮೇಲೆ ಚಕ್ಕರ ಪುರವೆಲ್ಲಿ ॥೩॥

**ಅಂಕ್ಷಮ್ಮ**

ತೊರೆಬೀರನಹಳ್ಳಿ ಮತ್ತು ಶಿಡನಕೋಟೆ ಹತ್ತಿರ ಡ್ಯಾಂ ಕಟ್ಟಿದ್ದಾರೆ. ಭತ್ತ ಬೆಳೆಯುವುದು, ಕೊಯ್ಯುಲ ಬರಬೇಕು, ಆದ್ದರಿಂದ ಕೊಯ್ಯುತ್ತಿರಲಿಲ್ಲ ಕಲ್ಲುಸಿರುಗುವ ಸಮಯದಲ್ಲಿ ಪೂಜೆ ಮಾಡಿ ಬಂದ ನಂತರ ಏಂಟು ಸೇರು ಆಗುವಷ್ಟು ಭತ್ತ ಕೊಯ್ಯುವುದು, ನಂತರ ಕರೇ ಕಂಬಳಿ ಮೇಲೆ ಒಣಗಿಸಿದ ಮೇಲೆ ಅದೇ ದಿನ ನಾಲ್ಕು ಗಂಟೆ ಸಮಯಕ್ಕೆ ಭತ್ತವನ್ನು ಕುಟ್ಟಿ ಅಕ್ಕಿ ಮಾಡಿ ನೆನೆಸಿಟ್ಟು ಮನೆಗೆ ಬಂದು ರಾತ್ರಿ ಹತ್ತು ಗಂಟೆವರೆಗೂ ಅಕ್ಕಿನ ನೆನೆಹಾಕಿರುವ ಅಕ್ಕಿಯ ಒಟ್ಟು ಆಗುವರೆವರೆಗೆ ಕೊಟ್ಟುವುದು. ನಂತರ ಬೆಲ್ಲ ಸೇರಿಸಿ ಎಡೆ ಮಾಡಿ ಮತ್ತೆ ಗಂಗಮ್ಮನ ಪೂಜೆ ಸಾಮಾಗಿ ತೆಗೆದುಕೊಂಡು ಹೋಗಿ ಅಕ್ಷಮ್ಮನ ಬಂಡೆ ಹತ್ತಿರ ವೇದಾವತಿ ನದಿಯಲ್ಲಿ ಚಿಲುಮೆ ತೆಗೆದು ಐದು ಬೆನಕನ ಕಲ್ಲುಗಳನ್ನು ಇಟ್ಟು ಅರಿಸಿಣ ಕುಂಕುಮ ಪೂಜೆಗೆ ಇಟ್ಟು ಶ್ರದ್ಧಭಕ್ತಿಯಿಂದ ಪೂಜೆ ಮಾಡಿಕೊಂಡು ಆಸಾಮಾಗ್ರಿಗಳನ್ನು ಮನೆ ತರುವುದರ ಜೊತೆಗೆ ತೀರ್ಥವನ್ನು ಬೆಳೆಗಳಿಗೆ ಹಾಕಿ ಭತ್ತವನ್ನು ಕೊಯ್ಯುವುದು ಈ ಸಂಪ್ರದಾಯ ಅನೇಕ ವರ್ಷಗಳಿಂದ ಆಚರಿಸುವ ಪದ್ಧತಿಯಾಗಿದೆ.

**ಗಂಜಿಗುಂಟಮ್ಮ**

ಚಳ್ಳಕೆರೆ ತಾಲ್ಲೂಕಿನ ೧೬ ಕಿ.ಮೀ ದೂರದಲ್ಲಿರುವ ಸಾಣೀಕೆರೆಯ ಮಧ್ಯಭಾಗದಲ್ಲಿ ನೆಲೆಸಿರುವ ಗಂಜಿಗುಂಟಮ್ಮ ಈ ಗ್ರಾಮದ ಜನರ ಆರಾಧ್ಯ ದೇವತೆಯಾಗಿದ್ದಾಳೆ. ದೇವತೆ ಸಾಣೀಕೆರೆಗೆ ಬಂದು ನೆಲೆಸಿರುವ ಬಗ್ಗೆ ಜನಪದ ಕತೆಗಳಿಂದ ಮಾಹಿತಿ ತಿಳಿಯಬಹುದಾಗಿದೆ. ಗಂಜಿಗುಂಟಮ್ಮ ದೈವೀ ಸ್ವರೂಪಿ ದೇವಿಯು ಹೊಳೆಯ ಗುಂಟ ಹೊಳೆಯ ದಡದಲ್ಲಿರುವ ಒಂದು ಮೊದೆಯಲ್ಲಿ ನೆಲೆಯೂರುತ್ತಾಳೆ. ದನಗಾಹಿ ಹುಡುಗರು ಹೊಳೆಯಲ್ಲಿ ನೀರು ಕುಡಿಸಲು ಜಾನುವಾರುಗಳನ್ನು ಹೊಡೆದುಕೊಂಡು ಬರುವಾಗ ನಾನೂ ನಿಮ್ಮ ಜತೆ ಬರುತ್ತೇನೆ ಎಂಬ ವಿಚಿತ್ರ ದನಿಯೊಂದನ್ನು ಕೇಳಿಸಿಕೊಂಡ ಹುಡುಗರು ಭಯಭೀತರಾಗಿ ಮನೆಯ ಹಿರಿಯರಿಗೆ ತಿಳಿಸುತ್ತಾರೆ. ಗಂಜಿಗುಂಟೆ ಗ್ರಾಮದ ಜಡಿಯಾರ ನಿಂಗಪ್ಪನ ಮಗನ ಕನಸಿನಲ್ಲಿ ಬಂದ ದೇವತೆ ನಿಮ್ಮ ಮನೆಗೆ ಬರುವುದಾಗಿ ಕೋರಿಕೊಳ್ಳುತ್ತಾಳೆ. ಅಂದಿನಿಂದ ಗಂಜಿಗುಂಟೆಯಲ್ಲಿದ್ದ ದೇವಿ ನಂತರದ ನದಿಗಳಲ್ಲಿ ಸಮೀಪದ ಸಾಣೀಕೆರೆಗೆ ಬಂದು ನೆಲೆಯೂರಿದಳು ಎಂಬ ಕತೆ ತಿಳಿಯಬಹುದಾಗಿದೆ.

ಗಂಜಿಗುಂಟಮ್ಮ ದೇವಿಯನ್ನು ಕರಿಯಮ್ಮದೇವಿ ಹೆಸರಿನಿಂದಲೂ ಕರೆಯುವ ವಾಡಿಕೆಯಾಗಿದೆ. ಇಂತಹ ದೇವತೆಗೆ ಮೂರು ವರ್ಷಗಳಿಗೊಮ್ಮೆ ಸಾಣೀಕೆರೆ ಸೇರಿದಂತೆ ಸುತ್ತಲ ಹಳ್ಳಿಗಳ ಜನರು ಒಂದು ವಾರಗಳ ಕಾಲ ನಡೆಯುವ ಜಾತ್ರೆಯಾಗಿದೆ. ಇಲ್ಲಿ ಬುಡಕಟ್ಟು ಸಮುದಾಯದ ಅನೇಕ ಆಚರಣೆಗಳನ್ನು ನಡೆಸುವುದು ಕಾಣಬಹುದಾಗಿದೆ. ಜಾತ್ರೆ ಪ್ರಾರಂಭಕ್ಕೂ ಮುನ್ನ ದೇವಿಯನ್ನು ಗಂಜಿಗುಂಟೆ ಹಳ್ಳಕ್ಕೆ ಕರೆದೊಯ್ದು ಹಳ್ಳದಲ್ಲಿ ಎರಡು ಚಿಲುಮೆ ತೋಡಿ ಅದರ ಬಂದ ನೀರಿನಿಂದ ದೇವಿಗೆ ಗಂಗಾಸ್ನಾನ ಅಭಿಷೇಕ ನಂತರ ಏಳು ಜನ ಈರಗಾರರು ಮತ್ತು ದೇವಿಯ ಪಟ್ಟದ ಪೂಜಾರಿ ಒಂದೊತ್ತಿನಲ್ಲಿ ಬಂದು ರೋಮಾಂಚನ ಉಂಟು ಮಧ್ಯರಾತ್ರಿಯಲ್ಲಿ ದೇವಿಯ ಅಗ್ನಿಕುಂಡದಲ್ಲಿ ನಡೆದು ಹೋಗುವುದು ಎಂಬ ಮಾಡುವುದು ಶ್ರದ್ಧೆಯಿಂದ ಭಕ್ತರೆಲ್ಲ ಸಮುದಾಯದವರು 'ಮಂದಾಲರು' ಸಾಣೀಕೆರೆಯ ದಡದಲ್ಲಿರುವ ವೀರಗಲ್ಲುಗಳಿಗೆ ವಿಶೇಷ ನಾಗಪೂಜೆ ಈ ಆಚರಣೆಯನ್ನು ನೋಡುತ್ತಾರೆ. ಇಲ್ಲಿ ನಾಯಕ ಮಾಡುತ್ತಾರೆ. ಇಲ್ಲಿನ ಆಚರಣೆಯು ಜನಪದರು ತಲತಲಾಂತರದಿಂದಲೂ ಸಂಪ್ರದಾಯ ನಂಬಿಕೆಗಳು ಇಂದಿಗೂ ಕಾಣಬಹುದಾಗಿದೆ. ಆದ್ದರಿಂದ ಜನಪದ ಸಂಸ್ಕೃತಿಯ ಜತೆಗೆ ಗಂಜಿಗುಂಟಮ್ಮನಿಗೆ ಮಹಿಳೆಯರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುಲು ವಿವಿಧ ಹರಕೆಗಳನ್ನು ಮಾಡಿಕೊಂಡು ಹಿಟ್ಟಿನಾರತಿ ಬೆಳಗುವುದು ಸೀರೆ ಉಡಿಸುವುದು ಎಲೆ ಪೂಜೆ ಕಟ್ಟಿಸುವ ಸಂಪ್ರದಾಯಗಳು ಪದ್ಧತಿಗಳನ್ನು ಅರ್ಥೈಸಬಹುದಾಗಿದೆ. ಬೆರೆತು ಹೋಗಿರುವ

**ಗೊರಲ್ಲತ್ತಿನ ಮಾರಮ್ಮ**

ವೇದವತಿ ನದಿಯ ದಡದಲ್ಲಿ ಅನಾದಿ ಕಾಲದಿಂದಲೂ ಜನಪದ ಸಂಸ್ಕೃತಿ ಬಿಂಬಿಸುವ ಹಲವಾರು ಸಾಂಸ್ಕೃತಿಕ ವೀರರ, ದೇವತೆಗಳ, ಪವಿತ್ರ ಗ್ರಾಮವಾಗಿ ಗೊಲ್ಲತ್ತಿ ಮಾರಮ್ಮ ವಿಶೇಷತೆ ಪಡೆದಿದೆ. ಗೊತ್ತಿತ್ತು ಸ್ವಾತಂತ್ರ್ಯ ಪೂರ್ವದಲ್ಲಿ ಆಂಧ್ರದ ಗ್ರಾಮವಾಗಿದ್ದು, ಗೊಲ್ಲಹಟ್ಟಿ ಎಂದು ಕರೆಯಲ್ಪಡುತ್ತಿದ್ದು, ತೆಲುಗಿನಲ್ಲಿ ಗೊಲ್ಲಹಟ್ಟಿಎಂದರೆ ಕುರಿಹಟ್ಟಿ ಎಂಬ ಅರ್ಥವಿದ್ದು ಈ ಗ್ರಾಮದಲ್ಲಿ ಕಾಲಾನಂತರದಲ್ಲಿ ಗೊರಹಟ್ಟಿಗೊರತ್ತಾಗಿ ಬದಲಾವಣೆಯಾಗಿದೆ. ಗ್ರಾಮದ ಹಿರಿಯರ ಅಭಿಪ್ರಾಯ ಪಡುತ್ತಾರೆ.

ಬುಡಕಟ್ಟು ಸಮುದಾಯದ ಗೊಲ್ಲ ಜನಾಂಗದ ಮುಟ್ಟಂ ಮುಲ್ಲೆ ಮಾರಪ್ಪ ಮತ್ತು ಚಿತ್ತಮ್ಮ ಎಂಬ ದಂಪತಿ ವಾಸಿಸುತ್ತಿದ್ದು

ಜೀವನೋಪಾಯಕ್ಕಾಗಿ ನದಿಯಲ್ಲಿರುವ ದೊಡ್ಡ ಬಂಡೆಯ ಹತ್ತಿರ 'ನಾನೂ ಬರುತ್ತೇನೆ' ಎಂಬ ಅಶರೀರವಾಣಿಯ ಶಬ್ದವನ್ನು ಕೇಳಿ ದಿಗಿಲುಗೊಂಡ ದಂಪತಿ ರಾತ್ರಿಯೆಲ್ಲಾ ಯೋಚಿಸಿ ನಾಳೆ ಏನಾದರೂ ಇದೇ ಶಬ್ದ ಬಂದರೆ ಒಳ್ಳೆಯದಾಗುವುದಾದರೆ ನಮ್ಮ ಜತೆ ಬಾ ಎನ್ನೋಣ ಎಂಬ ತೀರ್ಮಾನಕ್ಕೆ ಬರುತ್ತಾರೆ. ಗದ್ದುಗೆಯನ್ನು ಮಾಡಿ ಪ್ರಾರ್ಥಿಸಿದಾಗ ಭಯಂಕರವಾದ ಘರ್ಜನೆಯೊಂದಿಗೆ ಕಲ್ಲಿನ ಮೂರ್ತಿಯಾಗಿ ಗದ್ದುಗೆಯ ಮೇಲೆ ಬಂದಾಗ ಆ ಕಲ್ಲನ್ನು ತಂದು ಕುರಿಹಟ್ಟಿಯ ಹುದಿಯಲ್ಲಿ ಪ್ರತಿಷ್ಠಪಿಸಿ ಪೂಜಿಸುತ್ತಿದ್ದರಂತೆ ಅದರ ಪ್ರತೀಕವೆಂಬಂತೆ ಈಗಲೂ ನದಿಯಲ್ಲಿ ಎರಡು ಹುರೇಳಾಗಿರುವ ಬಂಡೆಯನ್ನು ಪೂಜಿಸಲ್ಪಡುತ್ತಿದ್ದು ಅದನ್ನು ಮಾರಿಕಲ್ಲು ಎಂದು ಕರೆಯುವ ವಾಡಿಕೆಯುಂಟು. ದೇವಿ ಜಾತ್ರೆ ಪ್ರತಿ ನಾಲ್ಕು ವರ್ಷಕೊಮ್ಮೆ ನಡೆಯುವ ಸಂದರ್ಭದಲ್ಲಿ ಒಂದು ವಾರ ಮುಂಚೆ ಮಾರಮ್ಮನನ್ನು ಜೋಗು (ಮಡಿಲಕ್ಕಿ) ತುಂಬುವ ಕಾರ್ಯಕ್ಕೆ ತವರು ಮನೆಯಾದ ಜಡೇಕುಂಟೆ ಕಾಪರಹಳ್ಳಿ ಕರೆದೊಯ್ದು ಭಕ್ತಿಯಿಂದ ಹಸಿರು ಸೀರೆ, ಉಡಿಯಕ್ಕಿ, ಹಸಿರು ಬಳೆಯನ್ನು ಕೊಡುವ ಪದ್ಧತಿಯು ಆಚರಣೆಯಲ್ಲಿದೆ.

ಈ ನಂತರ ಅಕ್ಕ-ಪಕ್ಕದ ಗ್ರಾಮಗಳಾದ ಬೆಳೆಗೆರೆ ನಾರಾಯಣಪುರ ತೊರೆಬೀರನಹಳ್ಳಿ, ಬುರುಡುಕುಂಟೆ ಕಲಮರಹಳ್ಳಿಗೆ ಹೋಗಿ ಮಡಲಕ್ಕಿಯನ್ನು ತುಂಬುವ ಜನಪದ ಸಂಪ್ರದಾಯ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಮಾರಮ್ಮನಿಗೆ ಕಣಜನಹಳ್ಳಿ ಕರಿಯಮ್ಮ ಅಕ್ಕ ಜಡೆಕುಂಟೆ ಕಾಟಪ್ಪ ಈಕೆಯ ಅಣ್ಣನಾಗಿದ್ದು ಜಾತ್ರೆಯಲ್ಲಿ ಕರಿಯಮ್ಮ ದೇವಿಯ ಊರ ಹೊರಗಡೆಯಿಂದ ಬಂದು ಉಡಸಲಮ್ಮನ ಗುಡಿಯ ಹತ್ತಿರ ಪೂಜೆಯನ್ನು ಸಲ್ಲಿಸುತ್ತಾರೆ. ಕರಿಯಮ್ಮ ದೇವಿಯು ಒಂದು ವೇಳೆ ಊರೊಳಗೆ ಬಂದರೆ ಭೀಕರ ಕ್ಷಾಮ ಮತ್ತು ಸಾವು ನೋವುಗಳು ಸಂಭವಿಸುತ್ತವೆ ಎಂದು ಇಲ್ಲಿನ ವಿಶಿಷ್ಟ ಆಚರಣೆಯಾಗಿರುವುದನ್ನು ತಿಳಿಯಬಹುದಾಗಿದೆ.

**ವಡ್ಡಗೆರೆ ನಾಗಮ್ಮ**

ವೈಭವದ ಸಿರಿವಾಳ ದೇವಾಲಯ ಚಳ್ಳಕೆರೆ ತಾಲ್ಲೂಕುನಿಂದ ೩೦ ಕಿ.ಮೀ ದೂರದಲ್ಲಿರುವ ಓಬಳಾಪುರವೆಂದು ಗುರುಸಿಕೊಂಡಿರುವ ಸಿರಿವಾಳ ಗ್ರಾಮ ಒಂಭೈನೂರು ವರ್ಷಗಳ ಹಿಂದೆ 'ಸಿರಿವೊಳಲು' ಅಥವಾ ಸಿರಿವಾಳ ಎಂಬ ಹೆಸರು ಬಂದಿತು. ವಡ್ಡಗೆರೆ ನಾಗಮ್ಮನ ಹಿನ್ನೆಲೆಯು ಬಗ್ಗೆ ಹೇಳುವುದಾದರೆ ಮಹಾಸತಿ ವಡ್ಡಗೆರೆ ನಾಗಮ್ಮನ ಮಾವನಾದ ವೀರಕ್ಯಾತರಾಯನು ಸಿರಿವಾಳದಲ್ಲಿ ಸಿದ್ದರಾಮೇಶ್ವರ ದೇವಸ್ಥಾನವನ್ನು ಕಟ್ಟಿಸಿದನೆಂದು ಜನಪದ ಕವಯತ್ರಿಯರು ತುಂಬಾ ವಿಸ್ತಾರವಾದ ಕಥಾಕಾವ್ಯವನ್ನೇ ಹಾಡುತ್ತಾರೆ. ಹದಿಮೂರನೇ ಶತಮಾನದಲ್ಲಿ ಬದುಕಿದ್ದ ಕೆಂಪನಂಜುಡ ಕವಿ 'ವಡ್ಡಗೆರೆ' ವೀರಕ್ಯಾತರಾಯನ ದಿಗ್ವಿಜಯ ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಕುಂಚಿಟಿಗ ಮಹಾ ಪುರಾಣದ ಪ್ರಕಾರ ಕಉಂಚಿಟಿಗೆ ಬಂ ಜನಾಂಗದವರು ಮುಸ್ಲಿಂ ದಾಳಿಕೋರರ ಉಪಟಳವನ್ನು ಸಹಿಸಲಾರದೇ ದೆಹಲಿ-ದೇವಗಿರಿಯ ಉತ್ತರದ ನಾಡಿನಿಂದ ದಕ್ಷಿಣದ ಕಡೆ ಎತ್ತಿನ ಬಂಡೆಗಳಲ್ಲಿ ವಲಸೆ ಬಂದಿರುವುದು ಎಂಬುದನ್ನು ತಿಳಿಯಬಹುದಾಗಿದೆ. ಇಲ್ಲಿನ ಓಬಳಾಪುರದ ಜನರು ವಡ್ಡಗೆರೆ ನಾಗಮ್ಮನಿಗೆ ಒಕ್ಕಲ ಮಕ್ಕಳಾಗಿ ನಡೆದುಕೊಳ್ಳುತ್ತಾರೆ. ಅದೇ ರೀತಿ ವಡ್ಡಗೆರೆಯ ಜನರು ಸಹ ಸಿರಿವಾಳ ಸಿದ್ದರಾಮೇಶ್ವರನ ಒಕ್ಕಲು ಮಕ್ಕಳಾಗಿ ಆರಾಧಿಸಿ ನಾಡಿನ ಕೋಯಮತ್ತೂರಿನ ತನಕ್ಕ ಒಕ್ಕಲು ಮಕ್ಕಳನ್ನು ಹೊಂದಿ ಸುಮಾರು ಆರುನೂರು ಮೈಲಿ ಭೂವಿಸ್ತಾರದಲ್ಲಿ ಚದುರಿಕೊಂಡಿರುವ ವಡ್ಡಗೆರೆ ನಾಗಮ್ಮ ಮತ್ತು ಸಿರಿವಾಳ ಸಿದ್ದರಾಮೇಶ್ವರನ ಜಾನಪದ ಸಾಂಸ್ಕೃತಿಕ ಪರಂಪರೆಯನ್ನು ತಿಳಿಯಬಹುದು.

ಸಿರಿವಾಳದ ಸಿದ್ದರಾಮೇಶ್ವರನ ದೇವಸ್ಥಾನಕ್ಕೆ ವಡ್ಡಗೆರೆಯಿಂದ ನಾಗಮ್ಮನು ಕುದುರೆ ಮೇಲೆ ಒಂದೇ ದಿನದಲ್ಲಿ ಬಂದು ಹೋಗುತ್ತಿದ್ದಳಂತೆ ಎಂಬ ಪ್ರತೀತಿ ಇದೆ. ವೀರಕ್ಯಾತರಾಯನು ಓರಂಗಲ್ಲಿನಿಂದ ಬೆಂಗಳೂರಿನ ನೆಲಮಂಗಳದವರೆಗೆ ರಾಜ್ಯಕಟ್ಟಿ ವಡ್ಡಗೆರೆಯನ್ನು ರಾಜಧಾನಿಯನ್ನಾಗಿ ಮತ್ತು ತಂಡಿ ಗ್ರಾಮವನ್ನು ಉಪರಾಜಧಾನಿಯಾಗಿ ಮಾಡಿಕೊಂಡಿದ್ದರು.(ಆನಪದ ಕವಿಯತ್ರಿಯರಿಂದ ತಿಳಿಯಬಹುದಾಗಿದೆ.

**ಮಾರಿಕಾಂಭಮ್ಮ**

ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಗ್ರಾಮದಲ್ಲಿರುವ ಮಾರಿಕಾಂಭ ದೇವಾಲಯವು ಚಿತ್ರದುರ್ಗ ಪಾಳೆಯಗಾರರ ಕಾಲದ ಶಾಕ್ತ ದೇವಾಲಯಗಳಲ್ಲಿ ಪ್ರಮುಖವಾಗಿದೆ.

ದೇವಾಲಯದ ಗರ್ಭಗೃಹವು ಸರಳವಾಗಿದ್ದು, ಇದರ ದ್ವಾರಬಾಗಿಲ ಇಕ್ಕೆಲಗಳಲ್ಲಿ ಶೈವ ಸ್ತ್ರೀದ್ವಾರಪಾಲಕರ ಶಿಲ್ಪಗಳಿದ್ದು, ತುಂಬಾ ಸ್ಥಳೀಯ ಅಥವಾ ಜಾನಪದೀಯ ಶೈಲಿಯಲ್ಲಿವೆ. ಪ್ರಮಾಣಬದ್ಧತೆಯಲ್ಲಾಗಲಿ, ಆಕರ್ಷಕವಾಗಿಯಾಗಲಿ ರಚನೆಯಾಗಿಲ್ಲ. ಅಂತರಾಳವು ಸಭಾಮಂಟಪದಷ್ಟೇ ಅಗಲವಾಗಿದ್ದು, ಐದು ಅಂಕಣಗಳಿಂದ ಮತ್ತು ವಾಸ್ತುಶಿಲ್ಪ ಚಿತ್ರದುರ್ಗ ಪಾಳೆಯಗಾರರ ಕೂಡಿದೆ. ಇದರ ದ್ವಾರಬಂಧವನ್ನು ಇಟ್ಟಿಗೆಯಿಂದ ಕಟ್ಟಿರುವುದರಿಂದ ವಿವರಗಳು ಸಭಾಮಂಟಪವು ವಿಶಾಲವಾಗಿದ್ದು, ಪ್ರತಿಸಾಲಿನಲ್ಲಿ ಐದರಂತೆ ಹನ್ನೆರಡು ಕಂಬಗಳಿದ್ದು, ಮೊದಲ ಸಾಲನ್ನು ಹೊರತುಪಡಿಸಿ, ಉಳಿದೆರಡು ಸಾಲುಗಳಲ್ಲಿ, ಒಟ್ಟು ಹದಿನೈದು ಅಂಕಣಗಳನ್ನು ಹೊಂದಿದೆ. ಇಲ್ಲಿ ಒಟ್ಟು ಮತ್ತು ಮೇಲೆ ಮೂರು ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಅವುಗಳ ಸಾಲುಗಳ ಕಂಬಗಳ ಕೆತ್ತನೆ ಅಪೂರ್ಣವಾಗಿದೆ. ಈ ಕಂಬಗಳು ಕೆಳಗೆ, ಮಧು ಮೂಲೆಗಳನ್ನು ಎಲೆಯಾಕಾರದಲ್ಲಿ ತೋರಿಸಲಾಗಿದೆ. ಮಧ್ಯದಲ್ಲಿ ಎಂಟು ಮುಖಗಳ ಅಟಪಟಿಕೆಗಳಿವೆ. ಕೆಳ ಚೌಕಭಾಗದ ನಾಲ್ಕು ಕಂಬಗಳ ಕೆಳಗೆ ಮತ್ತು ಮಧ್ಯದ ಭಾಗಗಳಲ್ಲಿ ಗರುಡ, ತಂಬೂರಿ ವಾದಕ, ಪಟ್ಟದನಂದಿ, ಜಿಂಕೆ, ಒಂಟೆ, ಕುದುರೆ, ಆಂಜನೇಯ, ಹಂಸ, ಆಮೆ, (ಹಂಸದ ಸುತ್ತಲೂ ಏಡಿ, ಕಪ್ಪೆ, ಮೀನು, ಆಮೆಗಳಿರುವುದು ವಿಶೇಷ), ಪೂರ್ಣಕುಂಭ, ಕಳಸ, ಜೋಡಿಗಿಳಿ, ವೃಕ್ಷ ಮುಂತಾದ ಉಬ್ಬುಶಿಲ್ಪಗಳಿವೆ. ಇಲ್ಲಿಯ ಕಂಬಗಳ ಬೋದುಗೆಗಳು ಎರಡು ರೀತಿಯಲ್ಲಿದ್ದು, ನಾಲ್ಕು ಬದಿಗೆ ಸುರುಳಿಯಾಕಾರದ ಮುಂದಿನ ಸಾಲಿನ ಮೂರು ಕೆತ್ತನೆಗಳಿರುವುದು ಒಂದು ರೀತಿಯಾದರೆ, ನಾಲ್ಕು ಸುರುಳಿಗಳ ಕೆತ್ತನೆ ಬೋದುಗೆಗಳು ಇನ್ನೊಂದು ರೀತಿಯದವುಗಳಾಗಿವೆ. ಈ ಮಂಟಪದ ಛತ್ತು ಆಳವಾಗಿದ್ದು, ಅರಳುಕಮಲದ ಪುಷಾಕೃತಿಯಿದೆ.

ಮುಖಮಂಟಪವು ಸಭಾಮಂಟಪದಷ್ಟೇ ಅಗಲವಾಗಿದ್ದು, ಸಭಾಮಂಟಪಕ್ಕಿಂತ ಕೆಳಹಂತದಲ್ಲಿದೆ. ಇಲ್ಲಿ ಸಭಾಮಂಟಪದ ಪ್ರವೇಶಕ್ಕೆ ಮೂರು ಮೆಟ್ಟಿಲುಗಳಿದ್ದು, ಇಕ್ಕೆಲಗಳಲ್ಲಿ ಆನೆಸೊಂಡಿಲ ಕೈಪಿಡಿಗಳಿವೆ. ಸಭಾಮಂಟಪ ಮುಖಮಂಟಪಕ್ಕಿಂತ ಎತ್ತರಲ್ಲಿರುವುದರಿಂದ ಸಭಾಮಂಟಪದ ಅಧಿಷ್ಠಾನ ಇಲ್ಲಿ ಗೋಚರಿಸುತ್ತದೆ. ಈ ಮಂಟಪವು ತೆರೆದಿದ್ದು ಮುಂಭಾಗ ದಲ್ಲಿ ಆರು ಕಂಬಗಳಿವೆ. ಇವು ಉಳಿದ ಕಂಬಗಳ ಮಾದರಿಯಲ್ಲಿದ್ದರೂ ಹೆಚ್ಚು ಎತ್ತರವಾಗಿವೆ. ಇವುಗಳ ಮಧ್ಯದ ಚೌಕಭಾಗದಲ್ಲಿ ಮಾತ್ರ ಆನೆ, ನಾಗಬಂಧ, ಹಂಸ, ಹುಲಿ, ಕುದುರೆ ಹಾಗು ವಿವಿಧ ರೀತಿಯ ಪುಷ್ಪಾಕೃತಿಗಳ ಉಬ್ಬುಶಿಲ್ಪಗಳಿವೆ. ಮುಖಮಂಟಪದ ಮೂರನೆಯ ತೊಲೆಯ ಮೇಲೆ ಸರ್ಪ, ಪರಸರ ಎರಡೂ ಬದಿಗಳಿಂದ ಮೀನುಗಳನ್ನು ನುಂಗುತ್ತಿರುವ ಜೋಡಿ ಸರ್ಪಗಳ ಕೆತ್ತನೆ ಇದೆ. ಸಭಾಮಂಟಪದಲ್ಲಿ

ದೇವಾಲಯದ ಸುತ್ತಲಿನ ಅಧಿಷ್ಠಾನ ಗೋಚರಿಸುತ್ತಿಲ್ಲವಾದರೂ, ಗೋಚರಿಸುವ ಅಧಿಷ್ಠಾನದಿಂದ ಇದು ಮಂಚಬಂಧ ಶೈಲಿಯಲ್ಲಿದ್ದು ಉಪಾನಗಳ, ಕಪೋತ ಭಾಗಗಳನ್ನು ಹೊಂದಿದೆ ಎಂದು ಹೇಳಬಹುದು. ಬಿತ್ತಿ ಕೆತ್ತಲಾಗಿರುವುದು ಇಲ್ಲಿನ ವಿಶೇಷ. ಜೋಡಿ ಹಾಗು ಬೋದುಗೆಗಳು ಗೋಚರಿಸುತ್ತವೆ. ಈ ಬೋದುಗೆಗಳನ್ನು ಪೂರ್ಣರೂಪದಲ್ಲಿ ಮಟ್ಟಸಗೊಳಿಸಿದ ಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು ಸರಳವಾಗಿದೆ. ಇಲ್ಲಿ ಕಂಬಳ, ಶಾಲ, ಹಾರ, ಕೂಟಗಳಿವೆ. ಹಾಗೆಯೇ ಗರ್ಭಗೃಹದ ಮೇಲೆ ಇ ಗಾರೆಯಿಂದ ನಿರ್ಮಿಸಿದ ಶಿಖರವಿದ್ದು, ಶಾಲ, ಕೂಟ ಮತ್ತು ಹಾರಗಳನ್ನು ಹೊಂದಿದೆ. ಈ ಶಿಖರವು ಹೆಚ್ಚಾಗಿ ಸ್ಥಳೀಯ ಶೈಲಿಯನ್ನು ತುಂಬಿಸುತ್ತದೆ, ಸಭಾಮಂಟಪದ ಮಾಡಿನಲ್ಲಿ ಕಂಗೂರಾಕೃತಿಗಳಿವೆ. ದೇವಾಲಯದ ಮಾಡಿ ಸುತ್ತಲೂ ಇಳಿಜಾರಾದ ಮುಂಜೂರು ಇದೆ.

ನಾಯಕರ ಕಾಲದ ದೇವಾಲಯಗಳು ಕೆಲವು ಹೊಂದಿದ್ದರೆ, ಪ್ರಸುತ್ತ ಈ ದೇವಾಲಯವು ಕೆಲವು ವಿಭಿನ್ನ ವಿಷಯಗಳನ್ನು ಹೊಂದಿದ್ದು, ಅವು ತೀರಾ ಪ್ರಾದೇಶಿಕ ಅಂಶವನ್ನು ವ್ಯಕ್ತಪಡಿಸುತ್ತವೆ. ಗರ್ಭಗೃಹದ ದ್ವಾರಬಾಗಿಲ ಇಕ್ಕೆಲಗಳಲ್ಲಿ ಸ್ತ್ರೀ ದ್ವಾರಪಾಲಕರನ್ನು ತೋರಿಸಿರುವುದು ಮತ್ತು ಅವು ಅಸಹಜವಾಗಿರುವುದು, ದೇವಾಲಯಗಳ ಕಂಬಗಳ ಮೇಲೆ ಬೋದುಗೆಗಳನ್ನು ನಾಲ್ಕು ಸುರುಳಿಗಳಲ್ಲಿ ತೋರಿಸಿರುವುದು, ಕಂಬಗಳ ಮೇಲೆ ವೈವಿಧ್ಯಮಯವಾದ ಪ್ರಾಣಿ, ಪಕ್ಷಿ, ಸಸ್ಯ, ಗಿಡ, ಹೂದಾನಿ ಹಾಗೂ ವಿವಿಧ ರೀತಿಯ ಪುಷ್ಪಗಳನ್ನು ತೋರಿಸಿರುವುದು, ಅವುಗಳ ಕೆತ್ತನೆಯೂ ಜಾನಪದೀಯವಾಗಿರುವುದು. ಇವು ಬುಡಕಟ್ಟು ಸಮುದಾಯಗಳು ತಮ್ಮ ಮನೆಗಳ ಮೇಲೆ ಬಿಡಿಸುವ ಚಿತ್ರಗಳನ್ನು ಹೋಲುತ್ತವೆ. ಹಾಗಾಗಿ ಇಂತಹ ಶಿಲ್ಪಗಳನ್ನು ಕೆತ್ತಿರುವಲ್ಲಿ ಸ್ಥಳೀಯ ಕಲಾವಿದರನ್ನು ಬಳಸಿಕೊಂಡಿರುವುದನ್ನು ಗುರುತಿಸಬಹುದು.

ಎರಡನೆಯದಾಗಿ ಸಾಮಾನ್ಯವಾಗಿ ಪಾಳೆಯಗಾರರ ಕಾಲದ ಎಲ್ಲಾ ದೇವಾಲಯಗಳ ಭಿತ್ತಿಯಲ್ಲಿ ಕಂಬಗಳು, ಬೋದುಗೆಗಳು ಗೋಚರಿಸುತ್ತವಾದರೂ, ಪೂರ್ಣವಾದ ಕೆತ್ತನೆಯನ್ನು ಒಳಗೊಂಡಿರುವುದಿಲ್ಲ. ಆದರೆ ಮಾರಿಕಾಂಭ ದೇವಾಲಯದ ಸಭಾಮಂಟಮದ ಹೊರಗೋಡೆಯಲ್ಲಿ ಪೂರ್ಣವಾಗಿ ಕೆತ್ತಿದ ಬೋದುಗೆಗಳು ಹಾಗು ಹಾರಗಳ ಕಾಣಿಸುವುದು ವಿಶೇಷವೆನಿಸುತ್ತದೆ. ಮೂರನೆಯದಾಗಿ ಶಿಖರ, ಶಾಲ, ಕೂಟ ರಚನೆಯಲ್ಲೂ ಸ್ಥಳೀಯ ಲಕ್ಷಣಗಳನ್ನು ಅಳವಡಿಸಿಕೊಂಡಿರುವುದು. ಗರ್ಭಗೃಹದಲ್ಲಿ ದೇವಿಯ ವಿಗ್ರಹಯವಿದೆ.

ಮಿಥುನ ಶಿಲ್ಪಗಳಿವೆ. ದೇವಾಲಯದ ಭಿತ್ತಿಯ ಮಾಡಿನಲ್ಲಿ ಭಿತ್ತಿಯ ಮೇಲೆ ನಾಗಸರ್ಪಮೇಲೆ ವಿಶಿಷ್ಟ ಲಕ್ಷಣಗಳನ್ನು ಉದಾಹರಣೆ ವಾಸ್ತು ಇಲದ ಕತಿ ಮತ್ತು ವಾಸ್ತುಶಿಲ್ಪ ವಿಗ್ರಹವಿದೆ. ಚಿತ್ರದುರ್ಗ ಪಾಳೆಯ ವ್ಯಕತಪಡಿಸುತ್ತಾರೆ. ಅವೇ ಮುಂದೆ ತಮ್ಮ ದೇವರುಗಳಾದವು. ಮ್ಯಾಸಬೇಡರ ಪ್ರಕೃತಿಯ ಆರಾಧಕರಾಗಿಯೂ ತಮ್ಮ ಶೈವ ಮತ್ತು ವೈಷ್ಣವ ದೈವ ಭಕ್ತಿಯು ಅಲೆಮಾರಿಗಳಾದ ಇವರುಗಳು ಆಂಧ್ರದ ಶ್ರೀಶೈಲದಿಂದ ಬಂದಂತಹ ಸಂದರ್ಭ ರಸ್ತೆ, ಮೇಲೆ ಮೊದಲು ಶೈವ ಪಂಥದ ಪ್ರಭಾವವಿದ್ದು ನಂತರ ವೈಷ್ಣವ ಸಹ ಆಗಿದೆ. ಕಂಪಳರಂಗಪಂಥದ, ಓಬಳದೇವರು, ನಲಜರವು ಓಬಳದೇವರು, ಅಲಿಕೋಬಳದೇವರ ಆಹೋಬಲನರಸಿಂಹ ಇವು ವಿಷ್ಣುವಿನ ಸ್ವರೂಪಗಳಾಗಿವೆ. ಇವರಲ್ಲಿ ಪೆಟ್ಟಿಗೆ ದೇವರುಗಳ ವಿಶೇಷವಾಗಿದ್ದು ಪೆಟ್ಟಿಗೆಯಲ್ಲಿ ಈಶ್ವರಲಿಂಗ ಇರುವುದರಿಂದ ಕಾಟಂಲಿಂಗೇಶ್ವರ ಮತ್ತು ಶ್ರೀಶೈಲ ಮಲ್ಲಿಕಾರ್ಜುನಂತಹ ಶೈವ ದೇವರುಗಳ ಆರಾಧನೆಯನ್ನು ಮಾಡುವುದುಂಟು. ಭೂಲೋಕದಲ್ಲಿ ಬ್ರಹ್ಮನಿಗೆ ಪೂಜೆಯಿಲ್ಲ ಎಂದು ಹೇಳುವುದುಂಟು. ಹೀಗಾಗಿ ಇವರು ಗೌರಸಂದ್ರಮಾರಮ್ಮ, ಗಾಳಿಮಾರಮ್ಮ, ದುರುಗಮ್ಮ ಆರಾಧಕರಾಗಿದ್ದಾರೆ. ಉಡುಸಲಮ್ಮ, ಚಳ್ಳಕೇರಮ್ಮ, ಕರಿಯಮ್ಮ ಮತ್ತು ಎಲ್ಲಮ್ಮ ಇತ್ಯಾದಿ ಸ್ತ್ರೀದೇವತೆಗಳ ಸ್ತ್ರೀದೇವತೆಗಳು ಕುದ್ರದೇವತೆಗಳು ಎಂಬ ಭಯದಿಂದ ತಮ್ಮ ಹರಕೆಯನ್ನು ತೀರಿಸುವುದರ ಮೂಲಕ ಶಾಂತಪಡಿಸುವುದುಂಟು. ಹರಕೆಯಾಗಿ ಕೋಣ, ಕುರಿ, ಮೇಕೆ ಮತ್ತು ಹೋತಗಳನ್ನು ಬಲಿಕೊಡುತ್ತಾರೆ. ಬೇವಿನಸೀರೆ ಉಡುವುದು, ಮದ್ದಕ್ಕಿ ಕೊಡುವುದು ಮತ್ತು ಬಳೆ–ಸೀರೆ ಅರ್ಪಿಸುವುದುಂಟು. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಹೊಸಪೇಟೆ ಭಾಗದಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಭಾಗದಲ್ಲಿ ಹಿಂದುಳಿದ ಜಾತಿಗಳಲ್ಲಿ ತಮ್ಮ ಹಿರಿಯ ಅಥವಾ ಕಿರಿಯ ಹೆಣ್ಣು ಮಕ್ಕಳನ್ನು ಗೆಜ್ಜೆಪೂಜೆ ಮಾಡಿ ದೇವತೆಯ ಹೆಸರಿನಲ್ಲಿ ದೇವದಾಸಿಯರನ್ನಾಗಿ ಬಿಡುವಂತೆ ಪ್ರೇರಣೆ ನೀಡುತ್ತಾರೆ. ಈಗಾಗಲೇ ಕರ್ನಾಟಕದಲ್ಲಿ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಯಾಗಿದ್ದಾಗ ಸರ್ಕಾರದ ಆದೇಶದಂತೆ ದೇವದಾಸಿಗಳ ಪಟ್ಟಿ ತಯಾರಿಸಿದಾಗ ಕರ್ನಾಟಕದಲ್ಲಿ ಒಟ್ಟು ೨೧೦೦೦ ದೇವದಾಸಿಯರು ಇರುವುದು ತಿಳಿದು ಬಂದಿದೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಸಾವಿರಾರು ದೇವದಾಸ ಹಾಗೂ ದೇವದಾಸಿಯರು ಪಿಂಚಣಿಗಾಗಿ ಹೋರಾಟ ಮಾಡಿದ್ದನ್ನು ನೆನಪು ಮಾಡಿಕೊಡದೆ ಸರ್ಕಾರಿ ಸೌಲಭ್ಯಗಳು ದೊರೆಯುವುದಕ್ಕೆ ಪ್ರಾರಂಭಿಸಿದರೆ, ಆತ್ಮಗೌರವವನ್ನು ಬಿಟ್ಟು ದೇವದಾಸಿಯರಾಗಿ ಗುರುತಿಸಿಕೊಳ್ಳಲು ಬಯಸುತ್ತಾರೆ. ಇಂತಹ ಸಾಮಾಜಿಕ ಪಿಡುಗುಗಳು ದ್ವಿಗುಣಗೊಳ್ಳಲು ದಾರಿಯಾಗುತ್ತದೆ.

ಗಾಳಿಮಾರಮ್ಮನನ್ನು ಆಷಾಡ ಮಾಸದಲ್ಲಿ ಮ್ಯಾಸಬೇಡರು ಆಚರಿಸುತ್ತಾರೆ. ಇದರ ವೈಶಿಷ್ಟತೆ ಏನೆಂದರೆ ಹುತ್ತದ ಮಣ್ಣನ್ನು ತಂದು ಮಾರಮ್ಮನ ಪ್ರತಿಮೆಯನ್ನು ಮಾಡಿ, ಬೇವಿನ ಸೊಪ್ಪಿನ ಗುಡಿಸಲನ್ನು ಕಟ್ಟಿ, ಇದರೊಳಗೆ ಮಣ್ಣಿನ ಗಾಳಿಮಾರಮ್ಮ ಪ್ರತಿಮೆಯನ್ನು ಪೂಜಿಸಿ ಹಟ್ಟಿಗಳಲ್ಲಿರುವವರು ಸಿಹಿ ಎಡೆ ಮಾಡಿ ದೇವತೆಗೆ ಅರ್ಪಿಸಿದ. ಭಾದ್ರಪದ ಮಾಸದಲ್ಲಿ ಮ್ಯಾಸಬೇಡರು ತುಂಬಾ ಹಣವನ್ನು ಖರ್ಚು ಮಾಡುವ ಹಬ್ಬವಾಗಿದೆ. ಗೌರಸಮುದ್ರ ಮಾರಮ್ಮ ಜಾತ್ರೆ ಚಳ್ಳಕೆರೆ ತಾಲ್ಲೂಕಿನಲ್ಲಿ ಪ್ರಭಾವಶಾಲಿಯಾಗಿದ್ದು ಇದಕ್ಕೆ ಭಯಭಕ್ತಿಯಿಂದ ನಡೆದುಕೊಳ್ಳುತ್ತಾರೆ. ತಮಗೆ ಅನುಕೂಲವಾದ ಮಂಗಳವಾರದಂದು ಬಾದ್ರಪದ ತಿಂಗಳಲ್ಲಿ ವಿವಿಧ ಹಟ್ಟಿ, ಹಳ್ಳಿ ಇತರೆ ಭಾಗಗಳಲ್ಲಿ ಬಂಧು ಬಳಗ ನೆಂಟರಿಷ್ಟರು, ಸ್ನೇಹಿತರು ಸೇರಿಕೊಳ್ಳುವ ವಿಶೇಷ ಹಬ್ಬವಾಗಿದೆ. ಮನೆಗೆ ಒಂದು, ಎರಡು ಬೇಟೆ ಕೊಯ್ಯುವುದು, ಪಂಕ್ತಿ ಭೋಜನ ಮಾಡುವ ವಾಡಿಕೆಯುಂಟು. ಹಾಗೆಯೇ ಕೆಲವರು ಹೆಚ್ಚುವರಿ ಮಾಂಸವನ್ನು “ಮುರುಗಿ” ಮಾಡಿ (ಒಣಗಿಸಿ ಇಟ್ಟುಕೊಳ್ಳುವ ಮಾಂಸ) ಇದನ್ನು ಒಂದು ವರ್ಷದವರೆಗೆ ಇಟ್ಟುಕೊಳ್ಳುತ್ತಾರೆ. ಹಾಗೂ ವರ್ಷದುದ್ದಕೂ ಆಹಾರವಾಗಿಯೂ ಸಹ ಬಳಸುತ್ತಾರೆ. ಬುಡಕಟ್ಟು ಜನಾಂಗವಾದ ಮ್ಯಾಸಬೇಡರು ಆಷಾಢ ಮತ್ತು ಶ್ರಾವಣ ಮಾಸದಲ್ಲಿ ರೈತನಾದವನು ಮತ್ತು ಶ್ರಮಿಕನಾದವನು ಆಷಾಢದ ಗಾಳಿಗೆ ದೇಹ ಕರಗಿಹೋಗಿರುತ್ತದೆ. ಶ್ರಾವಣದಲ್ಲಿ ಕೃಷಿ ಚಟುವಟಿಕೆ ಇತ್ಯಾದಿ ಶ್ರಮದ ಕೆಲಸದಿಂದ ದಣಿದು ಹೋಗಿರುತ್ತಾನೆ. ಅವನಿಗೆ ದೈಹಿಕ ಶಕ್ತಿಗಾಗಿ ಪೌಷ್ಟಿಕ (ವಿಟಮಿನ್) ಆಹಾರ ಬೇಕಾಗಿರುತ್ತದೆ. ನಂತರ ಅವರವರ ಮನೆಗಳಲ್ಲಿ ಭೋಜನ ನಡೆಯುತ್ತದೆ. ಇದರಿಂದ ಊರುಗಳಲ್ಲಿ ಮಕ್ಕಳಿಗೆ ಬರುವ ಹಾಗೂ ಬಂದ ಕಾಯಿಲೆಗಳನ್ನು ಗಾಳಿಮಾರಮ್ಮ ಹೊತ್ತುಕೊಂಡು ಹೋಗುತ್ತಾಳೆ ಎಂಬ ನಂಬಿಕೆ ಉಂಟು. ಅಲ್ಲದೆ ಮನೆಯಲ್ಲಿನ ಹಳೆಯ ಪೊರಕೆ, ಪುಟ್ಟಿ, ಹಳೆ ಮೊರ ಮತ್ತು ಗಾಳಿ ಮಾರಮ್ಮನ ಪ್ರತಿಮೆಯನ್ನು ಊರ ಹೊರಗೆ ಕರೆದುಕೊಂಡು ಹೋಗಿ ವಿಸರ್ಜಿಸಿ ಬರುತ್ತಾರೆ. ಒಟ್ಟಾರೆಯಾಗಿ ಮಾರಮ್ಮನ ಹಬ್ಬ ಮಾಡುವುದು ಮಾತೃದೇವತಾ ಪೂಜೆಯಾಗಿದ್ದು, ಇದು ದ್ರಾವಿಡ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.

**ಗೌರಸಂದ್ರ ಮಾರಮ್ಮ**

ಬುಡಕಟ್ಟು ಸಮುದಾಯಗಳನ್ನು ಹಾಸುಹೊದ್ದ ಈ ಬಯಲು ಸೀಮೆಯ ಚಳ್ಳಕೆರೆಯಲ್ಲಿ ಕುಡಿಯುವ ನೀರಿಗೆ, ದನಗಳ ಮೇವಿಗೆ ಬರವಿರಬಹುದು ಆದರೆ ಹಬ್ಬ ಹರಿದಿನಗಳಿಗೆ ಯಾವುದೇ ರೀತಿಯಲ್ಲಿ ಬರವಿಲ್ಲ ಮಳೆ ಬರಲಿ ಬಿಡಲಿ, ಬಿತ್ತಿದ ಬೆಳೆ ಕೈಗೆ ಸಿಗಲಿ ಬಿಡಲಿ ಆದರೆ ಚಿತ್ರದುರ್ಗ ಜಿಲ್ಲೆಯ ಐತಿಹಾಸಿಕ ಜಾತ್ರೆಗಳಲ್ಲಿ ಬಹುದೊಡ್ಡ ಜಾತ್ರೆಗಳಲ್ಲಿ ಎರಡನೆ ದೊಡ್ಡ ಜಾತ್ರೆಎಂಬ ಹೆಗ್ಗಳಿಕೆ ಪಾತ್ರವಾಗಿರುವ ಗೌರಸಮುದ್ರ ಮಾರಿ ಹಬ್ಬಕ್ಕೆ ಸಲ್ಲುತ್ತದೆ. ಬುಡಕಟ್ಟು ಸಂಪ್ರಾದಯಕ್ಕೆ ಒಂದಾದ ಗೌರಸಮುದ್ರ ಮಾರಮ್ಮ ಜಾತ್ರೆ ಈ ಭಾಗದ ಸಂಸ್ಕೃತಿಯ ಪ್ರತೀಕವಾಗಿದೆ. ತಾಲ್ಲೂಕಿನ ಬಹುದೊಡ್ಡ ಜಾತ್ರೆಗಳಲ್ಲಿ ಒಂದಾದ ಹೊರಹೊಮ್ಮಿದೆ ಈ ಜಾತ್ರೆಗೆ ವಿಶೇಷವಾದ ಈ ಭಾಗದಲ್ಲಿ ಪ್ರತಿ ವರ್ಷಕ್ಕೋಮ್ಮೆ ನಡೆಯುವ ಜಾತ್ರೆಗೆ ಕರ್ನಾಟಕದಿಂದ, ಆಂಧ್ರಪ್ರದೇಶದವರೆಗೂ ಲಕ್ಷಾಂತರ ಭಕ್ತರನ್ನು ತನ್ನತ ಸೇಳೆಯುವ ಶಕ್ತಿ ಈ ದೇವಿಗಿದೆ ಎನ್ನುತ್ತಾರೆ. ಈ ದೇವಿಗೆ ಲಕ್ಷಾಂತರ ಭಕ್ತರು ಈ ಜಾತ್ರೆಗೆ ಸಾಕ್ಷಿಯಾಗುತ್ತಾರೆ. ಭಾದ್ರಪದ ಮಾಸದ ಆಗಸ್ಟ್ ತಿಂಗಳಲ್ಲಿ ನಡೆಯುವ ಮಾರಿ ಹಬ್ಬ ಊರತುಂಬೆಲ್ಲ ಸಡಗರ ಸಂಭ್ರಮ. ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಗ್ರಾಮದ ಬಳಿ ಇರುವ ತುಮ್ಮಲು ಎಂಬಲ್ಲಿ ಮಾರಮ್ಮನ ಸಮಾಧಿ ಇದೆ ಎಂದು ಮತ್ತು ಈ ಸಮಾಧಿ ಬಳಿ ವರ್ಷಕ್ಕೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ. ಸಮೀಪದ ಪಾಳೆಯಗಾರ ಪಟ್ಟುಗಾಳದ ರಾಯದುರ್ಗ ಹಾಗೂ ನಿಡಗಲ್ಲು ಪಾಳೆಯಗಾರರಿಗೆ ಸಂಬಧಿಸಿದತೆ ಮಾರಿಯ ಜೀವನದ ಘಟನೆಗಳನ್ನು ಕುರಿತು ನಂಬಲರ್ಹವಾದ ಹಾಗೂ ಆದರ ಪೂರ್ವದಂತ ಕಥೆಗಳು ಇವೆ. ಈ ದೇವಿಯನ್ನು ಆನಾದಿಕಾಲದಿಂದಲೂ ದುರ್ಗಿ, ಕಾಳಿ, ಮಹೇಶ್ವರಿ, ಇಂತೆಲ್ಲ ಹೆಸರುಗಳಿದ ಮತ್ತು ಮಧ್ಯನ ವೇಳೆ ತನ್ನ ಜಾತ್ರೆಯನ್ನು ಆಚರಿಸುಕೊಳ್ಳುವುದರಿಂದ "ಮಧ್ಯಾನದ ಮಾರಿ" ಎಂತಲು ಕರೆಯುತ್ತಾರೆ. ಮಾರಿ ಮಾನವ ಜನ್ಮದಲ್ಲಿ ಹುಟ್ಟಿ ಸಾಧನೆಯ ಸಿದ್ಧಿಪಡೆದು ದೈವತ್ವ ಪಡೆತಿದ್ದಾಳೆ ಎಂಬುದರಲ್ಲಿ ಸಂಶಯವಿಲ್ಲ ಎಂಬುದು ದೃಢನಂಬಿಕೆ.

ಗೌರಸಂದ್ರ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ತಾಲ್ಲೂಕು ಕೇಂದ್ರದಿಸಿದ ಈಶಾನ್ಯಕ್ಕೆ ೩೦ ಕಿ.ಮೀ ದೂರದಲ್ಲಿದೆ ಗಡಿ ಹಂಚಿಯನಲ್ಲಿ ಆರವತ್ತರ ದಶಕದಲ್ಲಿ ಮಾರಮ್ಮ ಗುಡಿ ಕೇವಲ ಕಾವಡೆ ಹುಲ್ಲಿನ ಗುಡಿಸಲು, ಗುಡಿಯಾಗಿದ್ದು ಈಗ ಊರೊಳಗೆ ಭವ್ಯ ದೇಗುಲವಾಗಿ ಮಾರ್ಪಟಿದೆ. ಈಕೆಯ ಪಕ್ಕದಲ್ಲಿ ಮ್ಯಾಸ ಬೇಡರ ಬೊಮ್ಮಬೇಡರ ಗುಡಿ ಕೂಡ ಇದೆ. ಈ ಗ್ರಾಮವನ್ನು ಹಿಂದೆ ಗೌರಿ– ಚಂದ್ರ, ಎಂದು ಕೆರೆಯುತ್ತಿದ್ದಾರು, ಎಂದು ಪ್ರತಿಥಿ ಇದೆ, ಕಾಲ ಕ್ರಮೇಣ ಉಚ್ಚಾರದಲ್ಲಿ ಗೌರಚಂದ್ರ, ಗೌಚರ್ಂದ್ರ, ಗೌಸಂದ್ರ, ಗೌರಸಮುದ್ರವಾಯಿತು, ಆನಂತರ ಇತ್ತೀಚೀನ ಸರ್ಕಾರಿ ದಾಖಲೆಗಳ ಪ್ರಕಾರ ಗೌರಸಮುದ್ರ ಎಂದಿದ್ದರೆ. ಇಲ್ಲಿನ ಮಾರಮ್ಮನ ಮೂಲೆ ನೆಲೆ ಗೌರಸಮದ್ರದ ತುಮ್ಮಲು ಎಂಬ ವಿಶಾಲವಾದ ಜಾಗದಲ್ಲಿ ಹುತ್ತದ ರೂಪದಲ್ಲಿ ಸ್ವರೂಪದಲ್ಲಿ ಮಾರಮ್ಮನ ಮೆರೆಮೂರ್ತಿ ಗ್ರಾಮದಲ್ಲಿ ಸಾಮಾನ್ಯವಾಗಿ ಮತ್ತು ಚಳ್ಳಕೆರೆಯಲ್ಲಿ ಕಾಗದ ಮತ್ತು ಬಳೆತಯಾರಾಗುತ್ತಿತ್ತು ಈ ಕಾಗದದ ಅಳತೆಗಳು 'ಗಜ' ಎಂದು ಹೆಸರಿತ್ತು.

**ದೀಪದ ಕಂಬದ ವಿಶೇಷ:**

ಯರಮಂಚನಾಯಕ ಆಗೀನ ಕಾಲದ ದೊರೆಯಾಗಿ ದೇವತೆಯ ಸೇವೆ ಮಾಡುತ್ತಿದ್ದು, ದೇವರ ನಂಬಿಕೆಯ ಪ್ರತೀಕವಾಗಿದೆ. ದೇವಿಯು ಗೌರ ಸಮುದ್ರದಿಂದ ತುಮ್ಮಲುಗೆ ಹೋಗುವ ಹಾದಿಯ ಮಧ್ಯದಲ್ಲಿ ಬಾವುಟ ಇಡಿದು ಮುಂದೆ ಸಾಗಬೇಕು ಮತ್ತು ಈ ತುಮ್ಮಲಿನಲ್ಲಿ ಯರಮಂಚನಾಯಕ ಸುಮಾರು ೨೦ಅಡಿ ಎತ್ತರದ ಸುಂಧರ ಕಲಾತ್ಮಾಕವಾದ ದೀಪ ಏರಿಸುವ ಕಲ್ಲಿನ ಕಂಬ ನೆಡಿಸಿ (ಸೂರ್ಯನಿಗೆ ನಮಸ್ಕಾರ) ನೀಡಿ ಪವಾಡ ಮೆರೆದ ಈ ಜಾತ್ರೆಯಲ್ಲಿ ಮಾರಿಯ ಹರಕೆ ತೀರಿಸಲು ಭಕ್ತಧಿಗಳು ಬಾಯಿಗೆ ಬಾಯಿ ಬೀಗ ಮತ್ತು ಬೇವಿನ ಸೀರೆ, ಮತ್ತು ಇನ್ನಿತರೆ ಹರಕೆಗಳನ್ನು ತೀರಿಸುತ್ತಾರೆ. ಒಂದತ್ತಿನಿಸಿದ ಸುಮಾರು ೯ ಜನ ಭಕ್ತಾದಿಗಳು ಒಬ್ಬರ ಮೇಲೆ ಒಬ್ಬರು ನಿಂತು ಸಮೃದ್ಧಿಯ ಸಂಕೇತವಾದ ದೀಪವನ್ನು ಹಚ್ಚಿ ದೇವಿಗೆ ಶರಣಾಗುತ್ತಾರೆ. ಈಗೇ ದೀಪದ ಕಲಂಬವನ್ನು ಏರಿ ಹಣತೆ ಹಚ್ಚಿದ ನಂತರ ಹೊಸದಾಗಿ ಬೆಳೆದ ಈರುಳ್ಳಿ ಸೂರು ಬಿಡುತ್ತಾರೆ, ಮತ್ತು ಸಂಜೆಗತ್ತಲು ಕವಿಯದ ಮುನ್ನವೇ ಜಾಗ ಬಿಡುವ ಪದ್ಧತಿ ಹಲವು ದಶಕಗಳಿಂದ ಇದೆ. ಗೌರಸಮುದ್ರ ಮಾರಮ್ಮನಿಗೆ ೧೪ ಜನ ಸೌರದವರು ಬಾದ್ಯಸ್ತರಾಗಿರುತ್ತಾರೆ.

ಒಂದೇನೆ ಬಂಗಾರಿ, ಕೊಡಗಿನವನು, ಯಂಜಿಮತ್ತಿನವನು, ಬಿಡರಾಮಲ್ಲನು, ದ್ಯಾವರಪ್ಪ, ಸೂಲಿಕನ, ಚೆಂಟಿನವನು ಪಟ್ಟನವನು, ಎಮಲಬ್ಬವನರು ಬಿಲ್ಲೆಬೋರನವನು, ಸಿಲುಕಿನವನು, ಸುಕ್ಕೆಪಾಪನವನು, ಕನಕನವನು, ಮುಡೇಲನವನು, ಇದ್ದರು ಎಂದು ಪುರ್ವಕರ ಬಲವಾದ ನಂಬಿಕೆ.

ಭಾದ್ರಪದ ಮಾಸದಲ್ಲಿ ಮಾರಮ್ಮನ ಹೆಸರಿನಲ್ಲಿ ಉತ್ತಮ ಮಾಂಸ ಆಹಾರ ತಿನ್ನುವುದರಿಂದ ಶಕ್ತಿವರ್ಧನೆಗೆ ಸಹಾಯಕವಾಗುತ್ತದೆ. ಈ ಹಬ್ಬದ ಸಂದರ್ಭದಲ್ಲಿ ಬೇವಿನ ಸೀರೆ ಉಡುವುದು ವಾಡಿಕೆ, ದೇವಸ್ಥಾನದ ಸುತ್ತಾಮುತ್ತಾ ರಾಶಿರಾಶಿ ಬೇವಿನ ಸೊಪ್ಪಿನ ಸೀರೆ ಬಿದ್ದಿರುತ್ತದೆ. ದೇವಸ್ಥಾನದ ಬಾಗಿಲಲ್ಲಿ ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಬೆತ್ತಲೆಯಾಗಿ ಬೇವಿನ ಸೊಪ್ಪನ್ನು ಮೈಗೆ ಸಂಪೂರ್ಣವಾಗಿ ಹಗ್ಗ ಅಥವಾ ದಾರದ ಸಹಾಯದಿಂದ ಕಟ್ಟಿಕೊಂಡಿರುತ್ತಾರೆ ಇಲ್ಲಿ ಮಕ್ಕಳು ಹಾಗೂ ಎಲ್ಲಾ ವಯೋಮಾನದ ಸ್ತ್ರೀಯರು ಇರುತ್ತಾರೆ. ಈ ಕ್ರಮ ಅವೈಜ್ಞಾನಿಕವಾಗಿ ಕಂಡುಬಂದರೂ ಇದರ ಹಿಂದೆ ವೈಜ್ಞಾನಿಕತೆಯಿದೆ ಸಂಶೋಧನೆಯ ಮೂಲಕ ಕಂಡುಕೊಳ್ಳಬಹುದು. ಹಾಗೂ ಇದು ದೇವತೆಯ ಹರ ಎಂಬುದಾಗಿ ಬಿಂಬಿಸಿಕೊಳ್ಳುತ್ತದೆ.

ಇನ್ನು ಕೆಲವರು ಮಾರಮ್ಮನ ಜಾತ್ರೆಯಲ್ಲಿ ಕೋಳಿಮರಿ ತೂರಿ ಬಿಡುವುದು ಮತ್ತು ಈರುಳ್ಳಿ ತೂರಿಬಿಡುವುದು ಕಂಡುಬರುತ್ತದೆ. ಇಲ್ಲಿ ಎಲ್ಲಾ ವರ್ಗದ ಜನರು ಕಂಡು ಬರುತ್ತಾರೆ. ಧಾರ್ಮಿಕ ಸಾಂಪ್ರದಾಯಿಕ ಆಚರಣಾ ವೃತ್ತಿಗಳಾದ ಪೋತರಾಜರು, ಗೊರಪ್ಪಗಳು, ಜೋಗಿಗಳು, ಊರು ಮಾರಮ್ಮನವರು, ದೇವದಾಸಿಯರು, ಪೂಜಾರಿಗಳು, ಜೋಗತಿಗಳು ಮತ್ತು ಮೊಂಡರು ತಮ್ಮ ಹರಕೆಗಳನ್ನು ತೀರಿಸುವುದನ್ನು ಈ ಜಾತ್ರೆಯಲ್ಲಿ ಕಾಣಬಹುದು. ಈ ರೀತಿ ಸಾಂಪ್ರದಾಯಿಕ ವೃತ್ತಿ ಅನುಸರಿಸುವುದು ಕಾನೂನು ಬಾಹಿರ ಹಾಗೂ ಅಜ್ಞಾನವನ್ನು ಸೂಚಿಸುತ್ತದೆ. ಇದರಿಂದ ಹೊರಬಂದು ಅಧುನಿಕ ಜಗತ್ತಿಗೆ ಸ್ಪಂದಿಸಬೇಕು ಹಾಗೂ ಇವರಿಗೆ ತಕ್ಷಣವೇ ಸರ್ಕಾರಿ ಸೌಲಭ್ಯಗಳನ್ನು ನೀಡಿ ಸಮಾಜದ ಮುಖ್ಯವಾಹಿನಿಗೆ ಸೇರ್ಪಡಿಸಬೇಕಾಗಿದೆ.

**ಸಿಡಿ ಆಡುವುದು:**

"ಸಿಡಿ" ಎಂದರೆ ಗ್ರಾಮ ದೇವತೆಗೆ ಮಾಡುವ ಒಂದು ಬಗೆಯ ಸೇವೆ. ಸಿಡಿ ಉತ್ಸವದ ಹಿನ್ನೆಲೆ ಪೌರಾಣಿಕ ಹಿನ್ನಲೆಯ ಮೂಲಕ ತಿಳಿದು ಬರುವಂತೆ ಬ್ರಾಹ್ಮಣ ಕನ್ಯೆಯನ್ನು ವಂಚನೆಮಾಡಿ ಮಾದಿಗ ಜನಾಂಗದ ವ್ಯಕ್ತಿ ವಿವಾಹವಾಗುತ್ತಾನೆ. ಅದು ಅವಳಿಗೆ ಗೊತ್ತಾದ ಮೇಲೆ ಅವನನ್ನು ಬಲಿತೆಗೆದುಕೊಳ್ಳಲು ಆ ಬ್ರಾಹ್ಮಣ ಕನ್ಯ ಮಾರಮ್ಮನ ಅವತಾರ ತಾಳಿ ಅವನನ್ನು ಉಗ್ರ ರೂಪದಲ್ಲಿ ತನ್ನ ಬೆರಳಿನ ಮೇಲೆ ಸಿಕ್ಕಿಸಿಕೊಂಡು ತಿರುವಿ ತಿರುವಿ ಸಾಯಿಸಿದಳೆಂಬ

ನಂಬಿಕೆ ಇದೆ. ಅದೇ ಸ್ವರೂಪದ ಅನುಕರಣೆ ರೀತಿಯನ್ನು ಸಿಡಿ ಹೊಂದಿರುವುದು ಕಂಡುಬರುತ್ತದೆ.

ಸಿಡಿ ಆಡುವುದು ಗಟ್ಟಿಗರಿಗೆ ಸರಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರೇ ಎಲ್ಲಾ ಕಡೆ ಸಿಡಿ ಆಡುವ ವಾಡಿಕೆ ಉಂಟು. ನುಂಕೆಮಲೆ, ಸಿದ್ದೇಶ್ವರ, ಚಳ್ಳಕೇರೆಮ್ಮ ಜಾತ್ರೆ ಸಂದರ್ಭಗಳಲ್ಲಿ ವಿಶೇಷವಾಗಿ ಕಾಣಬಹುದು. ಸಿಡಿಯ ಸ್ವರೂಪ ಒಂದು ಗಾಡಿಯ ಅಚ್ಚಿನ ಮಧ್ಯಭಾಗಕ್ಕೆ ಒಂದು ಉದ್ದನೆಯ ಮರದ ದಿಮ್ಮಿಯನ್ನು ಎರಡು ಅಡಿ ಗಾತ್ರ, ೨೫ ಅಡಿ ಉದ್ದನೆಯ ಕಟ್ಟಿ, ಅದರ ಮುಂಭಾಗದ ಸಿಡಿಮರವನ್ನು ಬೆನ್ನು ಹೊಟ್ಟೆ ಭಾಗಕ್ಕೆ ಕಟ್ಟಿ ಸುಮಾರು ೩೦ ಅಡಿ ಮೇಲ್ಭಾಗದಿಂದ ದೇಹ ನೆಲವನ್ನು ನೋಡುತ್ತಾ ಸಿಡಿ ಆಡುವ ವ್ಯಕ್ತಿ ಮಂಗಾಳಾರತಿ ತಟ್ಟೆಯಲ್ಲಿನ ಅರಿಶಿನ ಮತ್ತು ಬೇವಿನಸೊಪ್ಪು ಕೈಯಲ್ಲಿ ಹಿಡಿದು ಚಡಪಡಿಸುವ ದೃಶ್ಯ ನೋಡುಗರಿಗೆ ರೋಚಕವಾಗಿದ್ದರೆ, ಆಡುಗರಿಗೆ ನೋವಿನ ಸಂಗತಿ. ದೇವರಿಗೆ ಇಷ್ಟವಾದುದು ಹರಕೆಯಾದರೆ ಈ ರೀತಿಯಾದ ಸಿಡಿ ಕಾರ್ಯಕ್ರಮಕ್ಕೆ ವ್ಯಕ್ತಿ ಐದು ದಿನಗಳ ಉಪವಾಸ ವ್ರತವನ್ನು ಮಾಡಿ ಆಚರಿಸಿಕೊಳ್ಳುವ ಕಾರ್ಯ ಒಂದು ರೀತಿ ಅವರುಗಳಿಗೆ ಆರೋಗ್ಯಕರ ಚಟುವಟಿಕೆಯಾಗಿದೆ ಎನ್ನುತ್ತಾರೆ. ಇತ್ತೀಚೆಗೆ ಸರ್ಕಾರ ಬೆನ್ನಿಗೆ ಕೊಂಡಿ ಹಾಕುವುದನ್ನು ನಿಷೇಧಿಸಿದೆ. ಒಟ್ಟಾರೆಯಾಗಿ ಭಯಾನಕವಾದ ಈ ಸಂಪ್ರದಾಯಿಕ ಸಿಡಿ ಉತ್ಸವವನ್ನು ನಿಷೇಧ ಮಾಡಬೇಕೆಂಬ ಚಿಂತನೆಯಲ್ಲಿ ಸರ್ಕಾರ ಇರುವುದು ಒಳ್ಳೆಯ ಬೆಳವಣಿಗೆ ಒಮ್ಮೆ ಸಿಡಿ ಆಡುವವರನ್ನು ಸಂದರ್ಶಿಸಿದಾಗ ಅವರ ಹೇಳುವಂತೆ ಈ ರೀತಿ ಸಿಡಿ ಆಡುವುದರಿಂದ ದೇವರು ನಮ್ಮ ಆರೋಗ್ಯ ಕಾಪಾಡುತ್ತಾನೆ ಎಂಬ ನಂಬಿಕೆ ಅವರಲ್ಲಿ ಇದೆ.

ಸಿಡಿಗೆ ಸಂಬಂಧಿಸಿದಂತೆ, ಸಿಡಿಯು ಸಹ ಹಿಂಸೆಯಿಂದ ಕೂಡಿದ ಆಚರಣೆ ಯಾಗಿದ್ದು, ಸಾಮಾನ್ಯವಾಗಿ ಪರಿಶಿಷ್ಟ ಜಾತಿಗೆ ಸೇರಿದವರು ಸಿಡಿಯನ್ನು ಏರುವ ವ್ಯಕ್ತಿಗಳಾಗಿದ್ದು ಐದು ದಿನ ಕಟ್ಟುನಿಟ್ಟಾಗಿ ಉಪವಾಸವಿದ್ದು ತಮ್ಮನ್ನು ದಂಡಿಸಿಕೊಳ್ಳುವ ಮೂಲಕ ಹರಕೆಯನ್ನು ತೀರಿಸುತ್ತಾರೆ.

**ಉಪಸಂಹಾರ:**

ಒಟ್ಟಾರೆಯಾಗಿ ಜಾನಪದ ಕ್ಷೇತ್ರವು ಬಹು ವಿಸ್ತಾರವೂ, ವ್ಯಾಪಕವೂ ಆದ ವಿಶೇಷ ಜ್ಞಾನಕ್ಷೇತ್ರ, ಹಾಗಾಗಿ ಇಲ್ಲಿ ಉಳಿದ ಎಲ್ಲಾ ಕ್ಷೇತ್ರಗಳಿಗಿಂತ ಭಿನ್ನ ಮತ್ತು ವಿಶಿಷ್ಟ ಮನುಷ್ಯನಷ್ಟೇ ಹಳೆಯದಾದ ಮಾನವ ಬದುಕಿನ ಸಮಸ್ತ ಮುಖಗಳ ಸಮಷ್ಟಿಯ ಸೃಷ್ಟಿಯಾಗಿದೆ ಕಾರಣ ನಮ್ಮನ್ನು ನಾವು ಅರಿತುಕೊಳ್ಳಲು ಮತ್ತು ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆಗೂ ನಡೆದು ಬಂದ ದಾರಿಯ ಬಗೆಗೆ ತಿಳಿದುಕೊಳ್ಳಲು ಜಾನಪದ ಅಧ್ಯಯನ ಅತ್ಯಗತ್ಯ. ಪ್ರಸ್ತುತ ದಿನಗಳು ಉರುಳಿದಂತೆಲ್ಲಾ ಮಾನವನ ಜೀವನ ಬದಲಾಗುತ್ತಿದೆ. ಸಾಮಾನ್ಯವಾಗಿ ರಥೋತ್ಸವ, ಸಿಡಿಉತ್ಸವ, ಹೋಳಿಹಬ್ಬ, ಕಾರಹುಣ್ಣಿಮೆ, ಊರಮಾರಮ್ಮನ ಜಾತ್ರೆ ಇನ್ನು ಮುಂತಾದ ಕಡೆ ಎಲ್ಲಾ ಕೋಮಿನವರು ಸೇರಿ ವಿವಿಧತೆಯಲ್ಲಿ ಏಕತೆಯನ್ನು ತೋರುತ್ತಾರೆ. ಆದರೆ ಪ್ರಸ್ತುತ ಅಧ್ಯಯನವೂ ಅಂತಿಮವಲ್ಲ. ಏಕೆಂದರೆ ಈ ಅಧ್ಯಯನದಲ್ಲಿ ವಿವರಿಸಿದ ವಿವಿಧ ಹಂತದ ಶಿಲಾಯುಗದ ನೆಲೆಗಳನ್ನು ಕೇವಲ ಸ್ಥಳ ಪರಿಶೋಧನೆಯಿಂದ ಮಾತ್ರ ಗುರುತಿಸಿ ಅಲ್ಲಿ ದೊರೆತ ಅವಶೇಷಗಳನ್ನು ವಿವರಿಸಲಾಗಿದೆ. ಈ ಪರಿಸರದಲ್ಲಿ ಇತ್ತೀಚಿನ ದೇವಾಲಯಗಳ ಬಗ್ಗೆ ಅಧ್ಯಯನ ಮಾಡುವ ಅಗತ್ಯವಿದೆ. ನದಿಯನ್ನು ಕುರಿತು ಜನಪದ ಚರಿತ್ರೆ ಕಟ್ಟುವ ನೆಲೆಯಲ್ಲಿಯೂ ಅಧ್ಯಯನ ಮಾಡುವ ಅವಶ್ಯಕತೆಯಿದೆ. ನದಿಯ ಬಹುಭಾಗ ಸೀಮೆ ಜಾಲಿಗಿಡಗಳಿಂದ ಆವೃತವಾಗಿದೆ. ಅವುಗಳನ್ನು ಕಡಿದು ಸಂರಕ್ಷಣೆ ಮಾಡಬೇಕು. ಅಲ್ಲಲ್ಲಿ ಚೆಕ್ ಡ್ಯಾಂ, ಕೃಷಿಹೊಂಡ, ತಡೆಗೋಡೆ ನಿರ್ಮಿಸಿದರೆ ಇದರಿಂದ ರೈತರಿಗೆ ಸಹಾಯಕ ಹಾಗೂ ಜಲ ಸಂಪತ್ತು ಮತ್ತು ಸಸ್ಯ ಸಂಪತ್ತು ವೃದ್ಧಿಯಾಗುತ್ತದೆ. ಕೆರೆಗಳನ್ನು ಕುರಿತು ಚರ್ಚಿಸುವ ಅವಶ್ಯಕತೆ ಇದೆ ಎಂದು ಹೇಳಬಹುದು.

**ಆಧಾರ ಗ್ರಂಥಗಳು**


೧. ಧರಣೇಂದ್ರಯ್ಯ ಡಿ. ಮ್ಯಾಸಬೇಡರ ಅಭಿವೃದ್ಧಿ ಜಾನಪದ ಸಮಾಜೋ ಆರ್ಥಿಕ ಅಧ್ಯಯನ, ೨೦೨೦, ಪು.ಸಂ.೧೩೭.
೨. ಶಕುಂತಲ ಎನ್, ಚಿತ್ರದುರ್ಗ ಪಾಳೆಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ, ೨೦೧೧, ಪು.ಸಂ.೨೦೨–೨೦೪.
೩. ಲ್.ಆರ್.ಹೆಗಡೆ–ಪುರಾಣಕಥೆಗಳು; ಸುವರ್ಣ ಜಾನಪದ ಲೇಖನಗಳು, ಪು.ಸಂ.೪೭, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
೪. ಪುರುಷೋತ್ತಮ ಬಿಳಿಮಲೆ, ಐತಿಹ್ಯಗಳು; ಸುವರ್ಣ ಜಾನಪದ ಲೇಖನಗಳು, ಪು.ಸಂ.೧೨೧, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
೫. ಸಿದ್ದಲಿಂಗಯ್ಯ– ಗ್ರಾಮದೇವತೆಗಳು, ಪು.ಸಂ.೪೨, ೨೦೦೯, ಅಂಕಿತ ಪ್ರಕಾಶನ ಬೆಂಗಳೂರು.
೬. ವಿದ್ಯಾಶ್ರೀ ಎಸ್.ಹೆಚ್, ಹಿರಿಯೂರು ತಾಲ್ಲೂಕು ದೇವಾಲಯಗಳು ಮತ್ತು ಐತಿಹಾಸಿಕ ಸ್ಥಳಗಳು, ೨೦೧೦.
೭. ಮಂಜುನಾಥ್ ನಾಯಕ್, ಚಿತ್ರದುರ್ಗ ಜಿಲ್ಲಾ ದರ್ಶನ ೨೦೧೫.
೮. ಪಾಲಯ್ಯ, "ಚಿತ್ರದುರ್ಗದ ಐತಿಹ್ಯಗಳು ಜಾನಪದೀಯ ವಿಶ್ಲೇಷಣೆ" ಪ್ರಸಾರಾಂಗಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೭.
೯. ರಾಮದಾಸರೆಡ್ಡಿ.ಎಸ್.ಜಿ., ಕೃತಿ "ಚಿತ್ರದುರ್ಗದ ಪ್ರಾಕ್ ಚಾರಿತ್ರಿಕ ಆಧ್ಯಯನ" ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯.
೧೦. ಹೆಬ್ಬಾಲೆ ಕೆ. ನಾಗೇಶ್, "ಕಾವೇರಿ ಜಾನಪದ, ಪ್ರಸಾರಾಂಗ" ೨೦೦೫ ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೧. ರಂಗಸ್ವಾಮಿ. ಡಿ.ಟಿ, "ಚಿತ್ರದುರ್ಗಜಿಲ್ಲಾ ದೇವಾಲಯ ದರ್ಶಿನಿ", ಗಾಯಿತ್ರಿ ಪ್ರಕಾಶನ, ಚಿತ್ರದುರ್ಗ ೨೦೧೭.
೧೨. ಗೋಪಿನಾಥ ಜೆ, "ದಕ್ಷಿಣ ಭಾರತ ಪ್ರವಾಸ ಕೈಪಿಡಿ", ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು.
೧೩. ಜಿ. ಎಸ್. ರಾಮದಾಸರೆಡ್ಡಿ, "ವೇದಾವತಿನದಿಯ ಪ್ರಾಕ್ ಚರಿತ್ರೆಯ ಕುರುವುಗಳು", ೨೦೦೬.
೧೪. ಮೀರಾಸಾಭಿಹಳ್ಳಿ, ಶಿವಣ್ಣ, "ದುರುಗ ಜಾನಪದ".
೧೫. ಅಂಬಳಿಕೆ ಹಿರಿಯಣ್ಣ ಕಾಡುಗೊಲ್ಲರ ಜನಪದ ಗೀತೆಗಳು ೧೯೭೮.
೧೬. ರಾಜಣ್ಣ ಆರ್ ನಾಯಕ ಜನಾಂಗದ ಇತಿಹಾಸ ೧೯೮೨.
೧೭. ಮುತ್ತಯ್ಯ ಎಸ್.ಎಂ. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳು ಪರಂಪರೆ ಆಧುನಿಕತೆ ಸಂಪುಟ ೬, ೨೦೦೯.
೧೮. ವಕ್ತರು ಕೃಷ್ಣಪ್ಪ, ಉದ್ಯೋಗ ಅರ್ಚಕ, ಜಾಜೂರುಗ್ರಾಮ, ವಯಸ್ಸು ೭೨.